ಬೆಂಗಳೂರು, ಕೋಲಾರ, ಹಾಸನ, ಚಿತ್ರದುರ್ಗ, ದಾವಣಗೆರೆ, ವಿಜಯನಗರ, ಬಳ್ಳಾರಿ, ರಾಯಚೂರು, ವಿಜಯಪುರ, ಕಲಬುರ್ಗಿ

ದಶಕದ ನಡಿಗೆ... RNI No: KARKAN/2014/54928 ನೊಂದವರ ಧ್ವನಿ

# ಸಹಾಯ ವಾಣಿ

Postal Registration N.o KA/BGW--1862/2024-26

www.sahayavani.com SAHAYAVANI KANNADA DAILY PAPER ಕನ್ನಡ ದಿನಪತ್ರಿಕೆ

ಸಂಪುಟ: 11 Vol:11 ಸಂಚಿಕೆ: 147 Issuse:147 ದಿನಾಂಕ: 16–07–2024 Date:16-07-2024 ಮಂಗಳವಾರ Tuesday ಪುಟ:4 Page:4 ರೂ.: 3–00 Rs.3-00

ಸಂಪಾದಕರು: ಎಸ್.ಕೆ.ಒಡೆಯರ್ ಉಪ ಸಂಪಾದಕರು: ಸುಚಿತ್ರ ಎಸ್. ಒಡೆಯರ್ ಎಂಬಿಎ ಗೌರವ ಸಂಪಾದಕರು: ಗುರುರಾಜು ಎಂ., ಫೋ: 080–31212322 ಮೊ.: 9902543494 E-mail:sahayavani@gmail.com

## ಕಟ್ಟಡ ಕಾರ್ಮಿಕರ ಹಲವಾರು ಬೇಡಿಕೆಗಳು




**ಹೂವಿನಹಡಗಲಿ.** ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ ಎಐಟಿಯುಸಿ ಸಂಯೋಜಿತ ಹೂವಿನಹಡಗಲಿ ತಾಲೂಕು ಸಮಿತಿ ವತಿಯಿಂದ.ಕಾರ್ಮಿಕರ ಬೇಡಿಕೆಗಳ ಈಡೇರಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.ಪ್ರತಿಭಟನೇಯಲ್ಲಿ.ಎಐಟಿಯುಸಿ ರಾಜ್ಯ ಸಮಿತಿ ಸದಸ್ಯ ಹಲಗಿ ಸುರೇಶ ಮಾತನಾಡಿ.ಸರ್ಕಾರಕ್ಕೆ ಹಲವಾರು ಬಾರಿ ಮನವಿ ಸಲ್ಲಿಸಿ.ಕಟ್ಟಡ ಕಾರ್ಮಿಕರಿಗೆ ಅವಶ್ಯಕತೆ ಇಲ್ಲದ ಹಲವಾರು ತರಹದ ಕಿಟ್ಟಗಳು.ಕೋಟ್ಯಂತರ ಸಂಖ್ಯೆಯ ಕ್ಯಾಲೆಂಡರ್ ಗಳು.ಸರ್ಕಾರಿ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಮಾಡಿಸುವ ಬದಲಾಗಿ ಐದು ನೂರು ಕೋಟಿ ಗಿಂತಲೂ ಹೆಚ್ಚು ಖಾಸಗಿ ಆಸ್ಪತ್ರೆಗಳಿಗೆ ವೈದ್ಯಕೀಯ ತಪಾಸಣೆ ನೀಡಿರುವ ನೀತಿಗಳು ಮಂಡಳಿಯ ಹಣ ದುಂದುವೆಚ್ಚಕ್ಕೆ ಕಾರಣವಾಗಿವೆ..ನಕಲಿ ಕಾರ್ಮಿಕರ ವಿರುದ್ಧ ಕ್ರಮ ಕೈಗೊಳ್ಳಿ ಎಂದರೆ ನೈಜ ಕಾರ್ಮಿಕರ ಸವಲತ್ತುಗಳನ್ನು ತಡೆಹಿಡಿದು ವಜಾಗೊಳಿಸುತ್ತಿರುವುದು ಸರಿಯಲ್ಲ.. ಮಕ್ಕಳ ಶೈಕ್ಷಣಿಕ ಧನಸಹಾಯ ಕಡಿತಗೋಳಿಸಿರುವುದು.ಕಾರ್ಮಿಕರ ವಿರೋಧಿ ನೀತಿಯಾಗಿರುತ್ತದೆ.ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು.ಕಾರ್ಮಿಕ ಮಂತ್ರಿಗಳ. ಮತ್ತು.ಸಂಘಟನೆಗಳ ಜೊತೆ ಮಾತುಕತೆ ನಡೆಸಿ ತ್ರಿಪಕ್ಷೀಯ ತಿರ್ಮಾನಕ್ಕೆ ಬರಬೇಕು. ಈಗಾಗಲೆ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಧನಸಹಾಯ.ಮದುವೆ.ಇತರೆ ಬಾಕಿ ಇರುವ ಸೌಲಭ್ಯಗಳನ್ನು ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕೆಂದುರು.. ಹೋರಾಟದಲ್ಲಿ ತಾಲೂಕು ಅಧ್ಯಕ್ಷರಾದ ಬಾವಾಜಿ ಜಂಗ್ಲಿ ಸಾಬ್.ಗೌರವದ್ಯಕ್ಷ.ಅನ್ವರಸಾಬ್.ಪೀರವಲಿ. ಉಪಾದ್ಯಕ್ಷ ನಾಗರಾಜ್ ಕೊಟಿಹಾಳ್.ಚಮನ್ ಸಾಬ್. ಕೊಳಚಿ .ಬಸವರಾಜ ಸಂಸಿ. ಹಾಲಯ್ಯ.ಮಾಬುಸಾಬ್..ನೂರಾರು ಕಟ್ಟಡ ಮತ್ತು ಇತರೆ ಕಾರ್ಮಿಕರು ಭಾಗವಹಿಸಿದ್ದರು

## ಕವಿಪ್ರನಿನಿ ಕಾರ್ಯ ನಿರ್ವಹಕ ಇಂಜಿನಿಯರ್ ವರ್ಗಾವಣೆ

ಕವಿಪ್ರನಿನಿ ಕಾರ್ಯ ನಿರ್ವಹಕ ಇಂಜಿನಿಯರ್ ವರ್ಗಾವಣೆಯಲ್ಲಿ ಕೇವಲ ಒಂದು ಪ್ರಬಲ ಜಾತಿ ಸಮುದಾಯದವರಿಗೆ ಮಾತ್ರ ಪ್ರಾಮುಖ್ಯತೆ ಯಾಕೆ?ಇದು ರಾಜ್ಯದ ನೌಕರರ ವರ್ಗದಲ್ಲಿ ಮೂಡಿರುವ ಪ್ರಶ್ನೆ?

ಬೆಸ್ಕಾಂ ವರ್ಗಾವಣೆಗೊಂಡ 19 ರಲ್ಲಿ 17 ಮಂದಿ ಒಂದೇ ಸಮುಧಾಯದವರು ಇರುವುದರ ಹಿಂದಿನ ಮರ್ಮ ವೇನೆಂದು ಇಂದನ ಸಚಿವ ಕೆ.ಜೆ.ಜಾರ್ಜ್ ರವರು ಬಹಿರಂಗ ಪಡಿಸಬೇಕು.ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಾಮಾಜಿಕ ನ್ಯಾಯದ ಬಗ್ಗೆ ಕೇವಲ ಭಾಷಣಕ್ಕಷ್ಟೇ ಸೀಮಿತವೇ?ಎಂದು ಅನುಮಾನ ಪಡುವಂತಾಗಿದೆ.ಮಾನ್ಯ ಮುಖ್ಯಮಂತ್ರಿಗಳು ಮಧ್ಯಪ್ರವೇಶಿಸಿ ಕೂಡಲೇ ಇಂದನ ಸಚಿವರು ಮತ್ತು ಅಧಿಕಾರಿಗಳನ್ನು ಸಭೆಕರೆದು ಕಾರಣವೇನೆಂದು ತಿಳಿದು ಎಲ್ಲಾ ಸಮುದಾಯದ ನೌಕರರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಈ ಮೂಲಕ ಗಮನ ಸೆಳೆಯಲಾಗಿದೆ.



| | | | |
|---|---|---|---|
| 1. | [illegible] ಪಿನ್-13584 | [illegible] | [illegible] |
| 2. | [illegible] ಪಿನ್-11613 | [illegible] | [illegible] |
| 3. | [illegible] ಪಿನ್-13768 | [illegible] | [illegible] |
| 4. | [illegible] ಪಿನ್ 13821 | [illegible] | [illegible] |
| 5. | [illegible] ಪಿನ್ 13613 | [illegible] | [illegible] |
| 6. | [illegible] ಪಿನ್ – 11588 | [illegible] | [illegible] |

## ವಾಸವಿ ಜಲಶಕ್ತಿ ಯೋಜನೆಯ ಅರ್ಹತೆಗಳು

ಈ ಯೋಜನೆಯಡಿ 2 ರಿಂದ 15 ಎಕರೆ ಕೃಷಿ ಭೂಮಿ ಹೊಂದಿರುವವರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಸಾಲ–ಸಹಾಯಧನವನ್ನು ನೀಡಲಾಗುವುದು. ಅರ್ಜಿದಾರರಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ 6,00,000/– ರೂ.ಗಳ ಮಿತಿಯೊಳಗಿರಬೇಕು. ಅರ್ಜಿದಾರರು 21ವರ್ಷ ಮೇಲ್ಪಟ್ಟು 55ವರ್ಷದ ಒಳಗಿನವರಾಗಿರಬೇಕು. ಈ ಯೋಜನೆಯಡಿ ಗರಿಷ್ಠ 2,00,000/– ರೂ.ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಒದಗಿಸಲಾಗುವುದು ಹಾಗೂ ವಿದ್ಯುದೀಕರಣಕ್ಕಾಗಿ 50,000/– ರೂ. ಗಳಸಹಾಯಧನ ನೀಡಲಾಗುವುದು. 6 ತಿಂಗಳ ವಿರಾಮಾವಧಿ ಇರುತ್ತದೆ ನಂತರ ಸಾಲವನ್ನು 34 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು.

# ಹೈವೋಲ್ಟೇಜ್ ಅಧಿವೇಶನ, ಹಗರಣಗಳ ಚರ್ಚೆಗೆ ಬಿಜೆಪಿ ಸಜ್ಜು: 'ಸಿಎಂ'ಗೆ ಅಗ್ನಿಪರೀಕ್ಷೆ

ಅಧಿಕಾರಕ್ಕೆ ಬಂದ 14 ತಿಂಗಳಲ್ಲಿ ವಿವಿಧ ಹಗರಣ, ಸಚಿವರ ಮೇಲೆ ನೇರ ಆರೋಪಗಳಿಗೆ ಸಾಕ್ಷಿಯಾದ ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ಪ್ಲಾನ್ ಮಾಡಿಕೊಂಡಿದೆ.

ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಕಲ್ಯಾಣಕ್ಕೆ ಸಿಮಿತವಾದ ವಾಲ್ಮಿಕಿ ನಿಗಮದ ಹಗರಣ, ಮುಡಾ ಹಗರಣ, ಸಚಿವ ನಾಗೇಂದ್ರ ತಲೆದಂಡ ಮತ್ತು ಬಂಧನ, ಅಧಿಕಾರಿಗಳ ವರ್ಗಾವಣೆ, ಬೆಲೆ ಏರಿಕೆ ಸೇರಿದಂತೆ ಹಲವು ಮಹತ್ವದ ವಿಚಾರಗಳನ್ನು ಬಿಜೆಪಿಗೆ ಚರ್ಚೆಗೆ ತರಲಿದೆ. ಸರ್ಕಾರದ ಮೇಲೆ ಮುಗಿಬೀಳಲಿದೆ.ವಾಲ್ಮಿಕ ಅಭಿವೃದ್ಧಿ ಹಗರಣ, ಅಧಿಕಾರಿ ಆತ್ಮಹತ್ಯೆ ಬೆನ್ನಲ್ಲೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (MUDA) ಹಗರಣವು ರಾಜ್ಯದಲ್ಲಿ ಭಾರೀ ಸಂಚಲನ ಸೃಷ್ಟಿಸಿದೆ. ಇದು ನೇರವಾಗಿ ಸಿಎಂ ಸಿದ್ದರಾಮಯ್ಯ ಅವರನ್ನೇ ಸುತ್ತಿಕೊಂಡಿದೆ. ಹೀಗಾಗಿ ಈ ಅಧಿವೇಶನ ಸಿಎಂ ಸಿದ್ದರಾಮಯ್ಯಗೆ ಅಗ್ನಿ ಪರೀಕ್ಷೆ ಎನ್ನಬಹುದಾಗಿದೆ.

ಬೆಲೆ ಏರಿಕೆಯು ಅಧಿವೇಶನದ ಪ್ರಮುಖ ವಿಷಯ? ಇಂಧನ ದರ ಏರಿಕೆ, ಹಾಲಿನ ಬೆಲೆ ಬೆಲೆ, ವಿದ್ಯುತ್ ಮತ್ತು ನೀರಿನ ದರ ಏರಿಕೆ ಪ್ರಸ್ತಾವನೆ, ಸಾರ್ವಜನಿಕ ಸಾರಿಗೆ ಪ್ರಯಾಣ ದರ ಏರಿಕೆಯ ಮನವಿ ವಿಚಾರಗಳು ಸಹ ಅಧಿವೇಶನದಲ್ಲಿ ಬಿಜೆಪಿ ಮುನ್ನೆಲೆಗೆ ತರಲಿದೆ. ಬೆಲೆ ಏರಿಕೆ ಬಗ್ಗೆ ಈಗಾಗಲೇ ಬಿಜೆಪಿ ಒಂದು ಸುತ್ತಿನ ಹೋರಾಟ ಮಾಡಿತ್ತು. ಎಸ್‌ಸಿ ಎಸ್‌ಟಿಗೆ ಅಭಿವೃದ್ಧಿಗೆ ಮೀಸಲಾದ ಅಪಾರ ಹಣವನ್ನು ಸರ್ಕಾರ ಗ್ಯಾರೆಂಟಿ ಯೋಜನೆಗಳಿಗೆ ಬಳಸಿಕೊಂಡಿರುವುದು ಮುನ್ನೆಲೆಗೆ ಬರುವ ಸಾಧ್ಯತೆ ಇದೆ.



ಸಿಎಂ ಸಿದ್ದರಾಮಯ್ಯ ಸೂಚನೆ ಏನಿದೆ? ಇದೆಲ್ಲ ಗಮನಿಸಿರುವ ಸಿಎಂ ಸಿದ್ದರಾಮಯ್ಯ, ಅಧಿವೇಶನದಲ್ಲಿ ಬಿಜೆಪಿ ಎತ್ತುವ ಚರ್ಚೆಗಳಿಗೆ ಆಯಾ ವಿಷಯಗಳಿಗೆ ಅನುಗುಣವಾಗಿ ತಕ್ಕ ಉತ್ತರ ನೀಡಲು ನಿಗದಿತ ಸಚಿವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಅಲ್ಲದೇ ಬಿಜೆಪಿ ಅವಧಿಯಲ್ಲಿ ಆಗಿರುವ ಹಗರಣ, ಭ್ರಷ್ಟಾಚಾರ ಪ್ರಸ್ತಾಪಿಸಿ ತಕ್ಕ ಉತ್ತರ ಕೊಡುವಂತೆ ಸಚಿವರಿಗೆ ನಿರ್ದೇಶಿಸಿದ್ದಾರೆ ಎಂದು ತಿಳಿದು ಬಂದಿದೆ.

ಈ ಮೇಲಿನ ಎಲ್ಲ ಅಂಶಗಳಿಂದ ಈ ಭಾರಿ ಮುಂಗಾರು ರಾಜ್ಯ ವಿಧಾನಮಂಡಲ ಅಧಿವೇಶನ ಹೈವೋಲ್ಟೇಜ್ ಅಧಿವೇಶನ ಆಗುವುದರಲ್ಲಿ ಸಂಶಯವಿಲ್ಲ. ಸಾರ್ವಜನಿಕರ ಚಿತ್ತವು ಈ ಅಧಿವೇಶನದತ್ತ ನೆಟ್ಟಿದೆ.

## ಮೊದಲ ಮದ್ವೆಯಿಂದ ಕಣ್ಣೀರಲ್ಲೇ ಕೈ ತೊಳೆದ್ರು ಅಪರ್ಣಾ! 39ನೇ ವಯಸ್ಸಿಗೆ 2ನೇ ಮದ್ವೆ ಆದ್ರೂ ಈಡೇರಲಿಲ್ಲ ಆ ಕನಸು.

**ಬೆಂಗಳೂರು:**

ಕನ್ನಡದ ನಿರೂಪಣಾ ಕೋಗಿಲೆ ಆಗಿದ್ದ ಅಪರ್ಣಾ ಅವರು ಕನ್ನಡ ನಾಡು ಕಂಡ ಅಪರೂಪದ ನಿರೂಪಕಿ. ಕನ್ನಡ ಭಾಷೆ ನುಡಿದ್ರೆ, ಅಪರ್ಣಾರಂತೆ ನುಡಿಯಬೇಕು ಅನ್ನೊದು ಅದೆಷ್ಟೋ ಜನರ ಕನಸಾಗಿತ್ತು. ಎಷ್ಟೋ ಜನರ ನಡೆ ನುಡಿಯಲ್ಲಿ ಕನ್ನಡ ಬಿತ್ತಿದ ಅಪ್ಪಟ ಕನ್ನಡತಿ ಅಪರ್ಣಾ ಶ್ವಾಸಕೋಶ ಕ್ಯಾನ್ಸರ್‌ನಿಂದ ಇಹಲೋಕ ತ್ಯಜಿಸಿದ್ದಾರೆ.

ನಾವು ಇಂದು ನಿಮಗೆ ಅಪರ್ಣಾ ಅವರ ಬಾಳಿನಲ್ಲಿ ನಡೆದು ಹೋಗಿದ್ದ ಒಂದು ಘಟನೆ ಕುರಿತಾಗಿ ಯಾರಿಗೂ ತಿಳಿಯದೆ ಇರುವ ಒಂದು ಸ್ಟೋರಿಯನ್ನು ನಿಮ್ಮ ಮುಂದೆ ತೆರೆದಿಡುತ್ತಿದ್ದೇವೆ. ಅಪರ್ಣಾ ಅವರ ತಂದೆ ಕೊಡ ಕೆ ಎಸ್ ರಾಮಸ್ವಾಮಿ ಸಿನಿಮಾ ಪತ್ರಕರ್ತ ಆಗಿದ್ದವರು. ತಾಯಿ ಪದ್ಮಿನಿ ಹಾಗೂ ತಮ್ಮನ ಹೆಸರು ಚೈತನ್ಯ. ಅಪರ್ಣಾ ಹುಟ್ಟಿದ್ದು ಚಿಕ್ಕಮಂಗಳೂರು ಜಿಲ್ಲೆಯ ಪಂಚಮನ ಹಳ್ಳಿಯಲ್ಲಿ ಆದ್ರೂ ಕೊಡ ಬೆಂಗಳೂರಿನಲ್ಲಿ ಪಿಯುಸಿ ವರೆಗೂ ಶಿಕ್ಷಣ ಪಡೆದುಕೊಂಡರು. ಅಪ್ಪ ಚಿತ್ರ ರಂಗದಲ್ಲಿ ಆದ್ದರಿಂದ ಸಂಪರ್ಕ ಕೊಡ ಚೆನ್ನಾಗಿಯೇ ಬೆಳೆಯಿತು. ಹಾಗಾಗಿ ಪುಟ್ಟನ ಕಣಗಾಲ್ ಚಿತ್ರಕ್ಕೆ 19ನೆ ವಯಸ್ಸಿಗೇ ನಾಯಕಿ ಆದರೂ. ಸಿನಿಮಾ, ನ್ಯೂಸ್ ಚಾನಲ್ ನಿರೂಪಣೆ ಹಾಗೂ ಪ್ರಮುಖ ಧಾರಾವಾಹಿಗಳಲ್ಲಿ ಯಶಸ್ವಿ ಕೊಡ ಆದರು. ಅಪರ್ಣಾ ಚಂದನ ಟಿವಿ ಚಾನೆಲ್‌ನಲ್ಲಿ ನಿರೂಪಕರಾಗಿ ಪ್ರಸಿದ್ಧರಾಗಿದ್ದರು. ಅವರು ಕನ್ನಡದ ವಿವಿಧ ಕಾರ್ಯಕ್ರಮಗಳಲ್ಲಿ ಮತ್ತು ಸುದ್ದಿಪ್ರಸಾರಗಳಲ್ಲಿ ತಮ್ಮ ಅದ್ಭುತ ನಿರೂಪಣೆಯಿಂದ ಜನಪ್ರಿಯರಾಗಿದ್ದರು. ಅವರ ವೃತ್ತಿಪರ ಜೀವನದ ಬಗ್ಗೆ ಹೆಚ್ಚು



ಮಾಹಿತಿ ಲಭ್ಯವಿದ್ದರೂ, ಅವರ ವೈಯಕ್ತಿಕ ಜೀವನವನ್ನು ಅವರು ಬಹಳ ಖಾಸಗಿಯಾಗಿ ಇಟ್ಟಿದ್ದಾರೆ. ಅವರ ಮೊದಲ ಮದುವೆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಬಹಿರಂಗ ಮಾಡಿಲ್ಲ.

ಅಪರ್ಣಾ ಅವರಿಗೆ ಕಲಾರಂಗದಲ್ಲಿ ಒಳ್ಳೆಯ ಬೇಡಿಕೆ ಇರುವ ವೇಳೆಯೆ ಭಾರತೀಯ ಮೂಲದ ಓಖಿಖ ವ್ಯಕ್ತಿ ವಿದೇಶದಲ್ಲಿ ಇದ್ದವರನ್ನು ಅಪರ್ಣಾ ಮದುವೆಯಾದರು. 2 ವರ್ಷಗಳ ಕಾಲ ಅಮೆರಿಕಾದಲ್ಲಿ ಮೊದಲ ಪತಿ ಜತೆ ಸಂಸಾರ ನಡೆಸಿದ್ದರು. ಆದರೆ ಅಮೆರಿಕಾದ ಜೀವರ ಜೀವನ ಇವರಿಗೆ ತುಂಬಾನೆ ನೋವನ್ನು ನೀಡಿತ್ತಂತೆ. ಆದರೆ ಆ ವ್ಯಕ್ತಿಯಿಂದ ಮಾನಸಿಕ ಹಿಂಸೆ ಅನುಭವಿಸಿದ ಕಾರಣ ಅವರಿಂದ ದೂರವಾದರು. ಮೊದಲ ಪತಿ ಕುರಿತಾಗಿ ಯಾವುದೇ ಮಾಹಿತಿ ಇಲ್ಲ. ಆದರೆ ಈಕೆ ಮೊದಲ ಪತಿಯಿಂದ ಚಿತ್ರ ಹಿಂಸೆ ಒಳಗಾದರು ಎನ್ನಲಾಗಿದೆ.

## ಹಳದಿ ಮೆಟ್ರೋ ಮಾರ್ಗದಲ್ಲಿ ಟ್ರಯಲ್ ರನ್ ಮುಕ್ತಾಯ

**ಬೆಂಗಳೂರು:** ಈ ಹಳದಿ ಮಾರ್ಗವು ಒಟ್ಟು 16 ಮೆಟ್ರೋ ಸ್ಟೇಷನ್‌ಗಳು ಇದ್ದು, ಬೆಂಗಳೂರಿನ ಆರ್.ವಿ ರಸ್ತೆಯಿಂದ ಬೊಮ್ಮಸಂದ್ರವನ್ನು ಸಂಪರ್ಕಿಸಲಿದೆ. 18.82 ಕಿ.ಮೀ. ಉದ್ದದ ಮೆಟ್ರೋ ಮಾರ್ಗದ ಕಾಮಗಾರಿ 2017ರ ನವೆಂಬರ್‌ನಲ್ಲಿ ಆರಂಭವಾಗಿತ್ತು. ಎಲ್ಲವೂ ಸರಿ ಇದ್ದರೆ 2023ರ ಜೂನ್‌ನಲ್ಲೇ ರೈಲು ಓಡಬೇಕಾಗಿತ್ತು.

ಹಳದಿ ಲೈನ್ ಮೆಟ್ರೋ ಆರಂಭವಾಗುವುದು ಈಗ ಹಸಿರು ಮಾರ್ಗದಲ್ಲಿರುವ ರಾಷ್ಟ್ರೀಯ ವಿದ್ಯಾಲಯ ರಸ್ತೆ ಸ್ಟೇಷನ್‌ನಿಂದ. ರಾಷ್ಟ್ರೀಯ ವಿದ್ಯಾಲಯ ಸ್ಟೇಷನ್‌ನಿಂದ ರಾಗಿಗುಡ್ಡ, ಜಯದೇವ ಆಸ್ಪತ್ರೆ ಬಿ ಟಿ ಎಂ ಬಡಾವಣೆ, ಕೇಂದ್ರ ರೇಷ್ಮೆ ಮಂಡಳಿ, ಬೊಮ್ಮನಹಳ್ಳಿ (ರೂಪೇನ ಅಗ್ರಹಾರ), ಹೊಂಗಸಂದ್ರ (ಗಾರ್ವೇಬಾವಿ ಪಲ್ಯ), ಕೂಡ್ಲು ದ್ವಾರ, ಸಿಂಗಸಂದ್ರ, ಹೊಸ ರಸ್ತೆ, ಬೆರಟೇನ ಅಗ್ರಹಾರ, ಕೋನಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ, ಹುಸ್ಕೂರು ರಸ್ತೆ (ವೀರಸಂದ್ರ), ಹೆಬ್ಬಗೋಡಿ, ಬೊಮ್ಮಸಂದ್ರ ಹೀಗೆ 14 ಸ್ಟೇಷನ್‌ಗಳು ಈ ಮಾರ್ಗದಲ್ಲಿವೆ.



## ಮುಡಾ ನಿವೇಶನ ಹಂಚಿಕೆಯ ವಿರುದ್ಧ ಆರೋಪ?ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ಆಯೋಗ ನೇಮಕ :ಸಿ.ಎಂ.ಸಿದ್ದರಾಮಯ್ಯ

**ಬೆಂಗಳೂರು:** ಮುಡಾ ನಿವೇಶನ ಹಂಚಿಕೆಯ ವಿರುದ್ಧ ಆರೋಪಗಳು ಕೇಳಿ ಬರುತ್ತಿದ್ದು, ಈ ಬಗ್ಗೆ ಪಾರದರ್ಶಕ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂಬ ಆಶಯದೊಂದಿಗೆ ರಾಜ್ಯ ಸರ್ಕಾರವು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಪಿ ಎನ್ ದೇಸಾಯಿ ಅವರ ನೇತೃತ್ವದಲ್ಲಿ ಏಕ ಸದಸ್ಯ ವಿಚಾರಣಾ ಆಯೋಗವನ್ನು ರಚಿಸಿ ತನಿಖೆಗೆ ವಹಿಸಿದೆ. ಪ್ರಕರಣದ ಕೂಲಂಕಷವಾದ ವಿಚಾರಣೆ ನಡೆದು, ಸತ್ಯಾಸತ್ಯತೆ ಹೊರಬರಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಶಿಸಿದ್ದಾರೆ.

# ಪ್ರಭಾವಿಗಳ ಪ್ರತಿಷ್ಠೆಗೆ ಅನಾಥವಾಯ್ತಾ ಚಿಕ್ಕಬಳ್ಳಾಪುರ ನಗರಸಭೆ..?

**ಚಿಕ್ಕಬಳ್ಳಾಪುರ :**

ನಗರದಲ್ಲಿ ಸರಿಯಾದ ಮೂಲಸೌಲಭ್ಯಗಳಿಲ್ಲದೆ ಜನರು ಕಂಗೆಟ್ಟಿದ್ದಾರೆ. ಗುಂಡಿಬಿದ್ದ ರಸ್ತೆಗಳು, ಹೂಳು ತುಂಬಿರುವ ಚರಂಡಿಗಳು, ಹಾಳಾಗಿರುವ ಒಳಚರಂಡಿ ವ್ಯವಸ್ಥೆ ಹೀಗೆ ನೂರೆಂಟು ಸಮಸ್ಯೆಗಳಿವೆ. ಇದಕ್ಕೆಲ್ಲಾಅನುದಾನದ ಸಮಸ್ಯೆಯೂ ಇದೆ. ದುರಂತ ಎಂದರೆ ಸಮರ್ಪಕವಾಗಿ ಆಡಳಿತ ನಡೆಸಿದರೆ ನಗರಸಭೆಗೆ ಅಂಗಡಿಗಳ ಬಾಡಿಗೆ ಮತ್ತು ಸುಂಕದಿಂದಲೇ ಕೋಟ್ಯಂತರ ರೂ. ಆದಾಯ ಬರಲಿದೆ. ಆದರೆ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾದ ಪ್ರಭಾವಿ ಜನಪ್ರತಿನಿಧಿಗಳು ಅದ್ಯಾವ ಒತ್ತಡ ಅಥವಾ ಕೈ ಕಸರತ್ತುಗಳಿಗೆ ಬಲಿಯಾಗಿದ್ದಾರೋ ಗೊತ್ತಿಲ್ಲ. ನಗರಸಭೆ ಆದಾಯಕ್ಕೆ ಮುಳುವಾಗಿರುವುದು ದುರಂತ.

ಚಿಕ್ಕಬಳ್ಳಾಪುರ : ನಗರಸಭೆಯಲ್ಲಿ ಜನಪ್ರತಿನಿಧಿಗಳಿದ್ದೂ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಗರಸಭೆ ಅಧ್ಯಕ್ಷರ ಅವಧಿ ಮುಗಿದು ಒಂದೂವರೆ ವರ್ಷವಾಗುತ್ತಾ ಬಂದರೂ ಹೊಸಬರ ನೇಮಕವಾಗಿಲ್ಲ. ಅರ್ಹತೆ ಇರೋ ಪೌರಾಯುಕ್ತರು ಇಲ್ಲ, ಹೀಗಾಗಿ ನಗರಸಭೆಯ ಎಲ್ಲ ಕಾರ್ಯಗಳಿಗೂ ಬೇ-ಕೋ ಬೇಡವೋ ಎನ್ನುವ ರೀತಿ ನಡೆಯುತ್ತಿದ್ದು ನಗರ ಅನಾಥ ಸ್ಥಿತಿಗೆ ತಲುಪಿದೆ.

ನಗರಸಭೆ ಅಧ್ಯಕ್ಷರಿಲ್ಲದೆ ಆಗಲೇ ಒಂದೂವರೆ ವರ್ಷವಾಗುತ್ತಾ ಬಂದಿದೆ. ಸದ್ಯ ಚುನಾಯಿತ ನಗರಸಭೆ ಸದಸ್ಯರ ಆಡಳಿತಾವಧಿ ಇನ್ನು 16 ತಿಂಗಳಷ್ಟೇ ೀ ಬಾಕಿ ಇದೆ. ಸದ್ಯಕ್ಕೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕಿರುವ ಮೀಸಲು ತಗಾದೆ ಸದ್ಯಕ್ಕೆ ಬಗೆಹರಿಯುವ ಲಕ್ಷಣಗಳೂ ಕಾಣುತ್ತಿಲ್ಲ. ಇನ್ನೊಂದೆಡೆ ಅರ್ಹ ಪೌರಾಯುಕ್ತರು ನೇಮಕವಾಗಿಲ್ಲ. ಜಿಲ್ಲಾಧಿಕಾರಿಯೇ ಆಡಳಿತಾಧಿಕಾರಿಯಾಗಿದ್ದಾರೆಯಾದರೂ ನಗರ ಕೇಂದ್ರೀಕೃತ ಕ್ರಿಯಾಶೀಲತೆ ಇಲ್ಲದೆ ನಗರದ ಅಭಿವೃದ್ಧಿ ಸೊರಗಿದೆ.

ಹೇಳೋರಿಲ್ಲ ಕೇಳೋರಿಲ್ಲ:ನಗರಸಭೆಗೆ ಸೇರಿದ 99 ಅಂಗಡಿಗಳ ಹರಾಜಿಗೆ ಮುಹೂರ್ತ ಫಿಕ್ಸ್ ಮಾಡಿ ಇನ್ನೇನು ಅಂಗಡಿಗಳ ಹರಾಜು ಆಗಬೇಕು ಎನ್ನುವ ಹೊತ್ತಿಗೆ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಹರಾಜನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದ್ದ ಪೌರಾಯುಕ್ತ ಮಂಜುನಾಥ್ ಪ್ರಭಾವಿಗಳ ಒತ್ತಡಕ್ಕೆ ಮಣಿದು ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಆ ಮೂಲಕ ಪ್ರಭಾವಿಗಳ ಮೇಲಾಟಕ್ಕೆ ಜಯ ಸಿಕ್ಕಿದ್ದು ನಗರಸಭೆ ಅನಾಥವಾಗಿದೆ. ಈಗ ಹೇಳೋರಿಲ್ಲ ಕೇಳೋರಿಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ.




ಪ್ರಭಾವಿಗಳ ಕೈಚಳಕ: ನಗರಸಭೆ ವ್ಯಾಪ್ತಿಯ ಸುಂಕ ಮತ್ತು ಅಂಗಡಿ ಮಳಿಗೆಗಳ ಬಾಡಿಗೆಯಿಂದಲೇ ನಗರಸಭೆಗೆ ಲಕ್ಷಾಂತರ ರೂ. ಆದಾಯ ಬರಬೇಕು. ಆದ-ರೆ ಹಲವು ಪ್ರ ಭಾವಿಗಳ ಕೈಚಳಕದಿಂದ ಬೊಕ್ಕಸಕ್ಕೆ ಕನ್ನ ಬಿದ್ದಿದೆ. ಇದನ್ನು ಅರಿತ ನಗರಸಭೆ ಆಡಳಿತ ಹರಾಜಿಗೆ ದಿನಾಂಕ ನಿಗದಿ ಮಾಡಿತ್ತು. ಆದರೆ ಈಗಾಗಲೇ ಬಾಡಿಗೆ ಪಡೆದಿರುವವರು ತಮ್ಮ ಪ್ರಭಾವ ಬಳಸಿ ಜನಪ್ರತಿನಿಧಿಗಳ ಮೂಲಕ ಒತ್ತಡ ಹೇರಿ ಕೊನೆಗೂ ನಾನಾ ಕಾರಣಗಳನ್ನು ಕೊಟ್ಟು ಹರಾಜು ದಿನಾಂಕವನ್ನು ಮುಂದೂಡಿಕೆ ಮಾಡಿಸಿದ್ದರು. ಹೀಗಾಗಿ ಪೌರಾಯುಕ್ತರು ರಾಜೀನಾಮೆ ಕೊಟ್ಟು ಹೊರಟಿದ್ದಾರೆ.

ಹರಾಜು, ಅನುದಾನ ಹಂಚಿಕೆ ತಕರಾರು: ಹರಾಜಿಗೆ ಸಂಬಂಧಿಸಿದಂತೆ ಪ್ರಚಾರ ನಡೆಯುತ್ತಿದ್ದಂತೆ ಅಲರ್ಟ್ ಆದ ಬಾಡಿಗೆದಾರರು, ಜನಪ್ರತಿನಿಧಿಗಳಿಗೆ ಹರಾಜು ನಿಲ್ಲಿಸಲು ನಾನಾ ಮಾರ್ಗಗಳ ಮೂಲಕ ಒತ್ತಡ ಹೇರಿದ್ದರು. ಈ ಹಿಂದೆ ಪೌರಾಯುಕ್ತರ ನೇಮಕವೇ ಕಾನೂನು ಬಾಹಿರ ಎಂದು ಹೇಳಿ ಕೋರ್ಟ್ ಮೆಟ್ಟಿಲೇರಿ ಹರಾಜು ಪ್ರಕ್ರಿಯೆಯ ಹಿನ್ನಡೆಗೆ ಕಾರಣವಾಗಿತ್ತು. ಮತ್ತೆ ಅದೇ ಪೌರಾಯುಕ್ತರೇ ಹರಾಜಿಗೆ ದಿನಾಂಕ ನಿಗದಿಗೊಳಿಸಿ ಪ್ರಚಾರ ಮಾಡಿದ್ದರು. ಆದರೆ ಪೌರಾಯುಕ್ತರ ನೇಮಕ ಕುರಿತು ಪ್ರಕರಣ ಹೈಕೋರ್ಟ್‌ನಲ್ಲಿರುವ ಕಾರಣ ಕೊಟ್ಟು ಹರಾಜನ್ನು ಮುಂದೂಡಲಾಗಿತ್ತು. ಅಲ್ಲದೇ ಅನುದಾನ ಹಂಚಿಕೆಯಲ್ಲೂ ನಾನಾ ತಕರಾರು ಏರ್ಪಟ್ಟ ಹಿನ್ನೆಲೆ ಪೌರಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗಿದ್ದಾರೆ ಎನ್ನುತ್ತವೆ ಮೂಲಗಳು.

ತಾರತಮ್ಯ ಆರೋಪ: ಇನ್ನೊಂದೆಡೆ 15ನೇ ಹಣಕಾಸು ಯೋಜನೆಯಡಿ ಒಂದೇ ವಾರ್ಡ್‌ಗೆ ಅನುದಾನ ಹಂಚಿಕೆ ಮಾಡಿದ್ದೂ ಈ ವಿವಾದಕ್ಕೆ ಕಾರಣವಾಗಿದೆ. ನಗರೋತ್ಥಾನ ಯೋಜನೆಯಡಿ ಹಳೇ ಕ್ರಿಯಾಯೋಜನೆಯನ್ನು ರದ್ದುಪಡಿಸಿ ಹೊಸ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ಆದರೆ ನಗರಸಭೆ ಸದಸ್ಯರ ಜತೆ ಚರ್ಚಿಸಿದೇ ಹೊಸ ಕ್ರಿಯಾಯೋಜನೆ ರೂಪಿಸಿರುವುದು ಈಗ ಆಕ್ಷೇಪಕ್ಕೆ ಕಾರಣವಾಗಿದೆ.ಇಷ್ಟೆಲ್ಲಾ ಅವಘಡಗಳಿರುವ ನಗರಸಭೆ ಆಡಳಿತ ತಹಬದಿಗೆ ಬರಬೇಕಾದರೆ ಸಮರ್ಥ ಪೌರಾಯುಕ್ತ ಹಾಗೂ ಅಧ್ಯಕ್ಷರ ಆಯ್ಕೆ ತೀರಾ ಅಗತ್ಯವಾಗಿದೆ. ನಗರಸಭೆ ಅಧ್ಯಕ್ಷರ ಮೀಸಲು ವಿವಾದ ಕೋರ್ಟ್‌ನಲ್ಲಿ ಇರುವುದರಿಂದ ಸದ್ಯಕ್ಕೆ ಅದು ಸರಿಯಾಗೋ ಲಕ್ಷಣಗಳೂ ಕಾಣುತ್ತಿಲ್ಲ. ಹೀಗಾಗಿ ಅವ್ಯವಸ್ಥೆಗಳ ಆಗರವಾಗಿರುವ ಚಿಕ್ಕಬಳ್ಳಾಪುರ ನಗರವನ್ನು ಆ ದೇವರೇ ಕಾಪಾಡಬೇಕು.

# Oppo F27 Pro+ 5G: ಅದ್ಭುತ ವೈಶಿಷ್ಟ್ಯಗಳುಳ್ಳ ಹೊಸ ಸ್ಮಾರ್ಟ್‌ಫೋನ್ ಬಿಡುಗಡೆ ಮಾಡಿದ ಒಪ್ಪೋ : ಬೆಲೆ ಎಷ್ಟು? ಏನಿದರ ವಿಶೇಷತೆ..?

ಸಾಕಷ್ಟು ನವೀನ ವೈಶಿಷ್ಟ್ಯಗಳ, ಸುದೀರ್ಘ ಬಾಳಿಕೆಯ ಭರವಸೆ ಮೂಡಿಸಿರುವ ಹೊಸ ಸ್ಮಾರ್ಟ್‌ಫೋನ್ ಅನ್ನು ಒಪ್ಪೋ ಭಾರತದಲ್ಲಿ ಬಿಡುಗಡೆ ಮಾಡಿದೆ. 30 ಸಾವಿರ ರೂಪಾಯಿಯೊಳಗಿನ ಮೊಬೈಲ್ ಫೋನ್ ಹುಡುಕುವವರಿಗೆ ಇದು ಕೂಡಾ ಉತ್ತಮ ಆಯ್ಕೆಗಳಲ್ಲಿ ಒಂದಾಗಿದೆ.?

ನೀವು 30 ಸಾವಿರ ರೂಪಾಯಿಯೊಳಗಿನ ಸ್ಮಾರ್ಟ್‌ಫೋನ್ ಹುಡುಕುತ್ತಿದ್ದೀರಾ...? ಹಾಗಾದರೆ ಒಪ್ಪೋ ನಿಮಗಾಗಿ ತಂದಿದೆ ಉತ್ತಮ ಅವಕಾಶ. ಯಾಕೆಂದ-ರೆ ಸಾಕಷ್ಟು ಅದ್ಭುತ ವೈಶಿಷ್ಟ್ಯ, ಸುದೀರ್ಘ ಬಾಳಿಕೆಯ ಭರವಸೆಯೊಂದಿಗೆ ಭಾರತದಲ್ಲಿ Oppo F27 Pro+ 5G ಸ್ಮಾರ್ಟ್‌ಫೋನ್ ಬಿಡುಗಡೆಯಾಗಿದೆ. ಈ ಮೂಲಕ ಭಾರತದಲ್ಲಿ ಒಪ್ಪೋ ತನ್ನ ಎಫ್-ಸರಣಿ ಸ್ಮಾರ್ಟ್‌ಫೋನ್‌ಗಳನ್ನು ವಿಸ್ತರಿಸಿದೆ.

ಹೊಸದಾಗಿ ಬಿಡುಗಡೆಯಾಗಿರುವ Oppo F27 Pro+ 5G ಮಿಲಿಟರ್ ಗ್ರೇಟ್ ಬಾಳಿಕೆಯೊಂದಿಗೆ ಬರುತ್ತದೆ. ಮಿಲಿಟರಿ ಗ್ರೇಟ್ ಸರ್ಟಿಫಿಕೇಷನ್‌ನೊಂದಿಗೆ ಬರುವ ಒಪ್ಪೋದ ಮೊದಲ ಎಫ್-ಸರಣಿ ಸ್ಮಾರ್ಟ್ ಫೋನ್ ಇದಾಗಿದೆ. ಇದಲ್ಲದೆ ಒಪ್ಪೋ ಎಫ್27 ಪ್ರೋ+ 5F ಮೀಡಿಯಾ ಟೆಕ್ ಚಿಪ್‌ಸೆಟ್ ಹಾಗೂ ಎಚ್‌ಡಿ ಪ್ಲಸ್ ಡಿಸ್‌ಪ್ಲೇಯೊಂದಿಗೆ ಬರುತ್ತದೆ. ಉತ್ತಮ ಸಾಮರ್ಥ್ಯದ ಕ್ಯಾಮೆರಾವನ್ನೂ ಇದು ಒಳಗೊಂಡಿದೆ. ಜೂನ್ 20 ರಿಂದ ಫೋನ್ ಮಾರಾಟ ಪ್ರಾರಂಭವಾಗಲಿದ್ದು, ಪ್ರೀ ಆರ್ಡರ್‌ಗೂ ಅವಕಾಶವಿದೆ.

## Oppo F27 Pro+ ಬಾಳಿಕೆ

ಸುದೀರ್ಘ ಬಾಳಿಕೆಯ ಭರವಸೆಯೊಂದಿಗೆ ಒಪ್ಪೋ ಎಫ್27 ಪ್ರೋ+ 5ಜಿ ಸ್ಮಾರ್ಟ್‌ಫೋನ್ ಎಂಟ್ರಿ ಕೊಟ್ಟಿದೆ. ಮಿಟಲಿರಿ ಗ್ರೇಡ್ ಡ್ಯುರೆಬಿಲಿಟಿ ಇದರ ಹೆಚ್ಚುಗಾರಿಕೆಯೂ ಹೌದು. ಅದೂ ಅಲ್ಲದೆ ಅತ್ಯಧಿಕ ಮಟ್ಟದ ಧೂಳು ಹಾಗೂ ಜಲ ಪ್ರತಿಯೋಧದ IP66, IP68 ಮತ್ತು IP69 ಈ ಮೂರೂ ರೇಟಿಂಗ್‌ಗಳನ್ನು ಹೊಂದಿರುವ ಮೊದಲ ಫೋನ್ ಕೂಡಾ ಇದಾಗಿದೆ. ಈ ಸ್ಮಾರ್ಟ್ ಫೋನ್ ಅನ್ನು ನಿರ್ದಿಷ್ಟವಾಗಿ ಅಧಿಕ ಒತ್ತಡ, ಹೈ ಟೆಂಪರೇಚರ್ ವಾಟರ್ ಜೆಟ್‌ಗಳನ್ನು ತಡೆದುಕೊಳ್ಳುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಜೊತೆಗೆ 30 ನಿಮಿಷಗಳ ಕಾಲ ನೀರಿನಲ್ಲಿ ಮುಳುಗಿದರೂ ಈ ಸ್ಮಾರ್ಟ್ ಫೋನ್‌ಗೆ ಯಾವುದೇ ಹಾನಿಯಾಗುವುದಿಲ್ಲ ಎಂದು ಕಂಪನಿ ಹೇಳಿಕೊಂಡಿದೆ. ಬರೀ ಇಷ್ಟೇ ಅಲ್ಲ, ಈ ಐಪಿ ರೇಟಿಂಗ್‌ನ ಜೊತೆ ಜೊತೆಗೆ ಹೊಸ Oppo ಈ27 Pro+ 5ಉ ಸ್ಮಾರ್ಟ್ ಫೋನ್ ಡ್ಯಾಮೇಜ್ ಪ್ರೂಫ್ 360-ಡಿಗ್ರಿ ಆರ್ಮರ್ ಬಾಡಿ ಪ್ರೊಟೆಕ್ಷನ್ ಹಾಗೂ ಕಾರ್ನಿಂಗ್ ಗೊರಿಲ್ಲಾ ಗ್ಲಾಸ್ 2 ಸ್ಕ್ರೀನ್‌ನೊಂದಿಗೆ ಬರುತ್ತದೆ.




## Oppo F27 Pro+ 5G ವೈಶಿಷ್ಟ್ಯಗಳೇನು?

ಹೊಸ ಒಪ್ಪೋ ಎಫ್27 ಪ್ರೋ+ 5ಜಿ ಫೋನ್‌ನ ವೈಶಿಷ್ಟ್ಯಗಳ ಬಗ್ಗೆ ನೋಡುವುದಾದರೆ, 1080x2412 ಪಿಕ್ಸೆಲ್ ರೆಸಲ್ಯೂಷನ್ ಜೊತೆಗೆ 6.7-ಇಂಚಿನ ಸಂಪೂರ್ಣ ಎಚ್‌ಡಿ ಪ್ಲಸ್ ಡಿಸ್‌ಪ್ಲೇಯೊಂದಿಗೆ ಬರುತ್ತದೆ. ಈ ಸ್ಮಾರ್ಟ್‌ಫೋನ್‌ನ AMOLED ಕರ್ವ್ಡ್ ಸ್ಕ್ರೀನ್ 120Hz ವರೆಗಿನ ರಿಫ್ರೆಶ್ ರೇಟ್ ಮತ್ತು 950 nits ಗರಿಷ್ಠ ಬ್ರೈಟ್‌ನೆಸ್ ಅನ್ನು ನೀಡುತ್ತದೆ.

ಒಪ್ಪೋ ಎಫ್27 ಪ್ರೋ+ 5ಜಿ ಫೋನ್ ಆಂಡ್ರಾಯ್ಡ್ 14 ಆಪರೇಟಿಂಗ್ ಸಿಸ್ಟಮ್‌ನಿಂದ ಚಾಲಿತವಾಗಿದೆ. ಇದು 64 ಮೆಗಾಪಿಕ್ಸಲ್ ಮೈನ್ ಕ್ಯಾಮೆರಾ 2 ಮೆಗಾಪಿಕ್ಸಲ್ ಡೆಪ್ತ್ ಸೆನ್ಸರೊಟ್ ಹೊಂದಿರುವ ಡ್ಯುವಲ್ ಕ್ಯಾಮೆರಾ ವೈಶಿಷ್ಟ್ಯವನ್ನು ಒಳಗೊಂಡಿದೆ ಹಾಗೂ ಮುಂಭಾಗದಲ್ಲಿ 8 ಮೆಗಾ ಪಿಕ್ಸೆಲ್ ಸೆಲ್ಫಿ ಕ್ಯಾಮೆರಾವನ್ನು ಹೊಂದಿದ್ದು, ಆಕರ್ಷಕ ಚಿತ್ರಗಳನ್ನೂ ಇದರಲ್ಲಿ ಸೆರೆಹಿಡಿಯಬಹುದಾಗಿದೆ.

ಇದು 8ಉಃ ಖಂಒನೊಂದಿಗೆ ಆಕ್ಟಾ-ಕೋರ್ ಮೀಡಿಯಾ ಟೆಕ್ ಡೈಮೆನ್ಸಿಟಿ 7050 ಪ್ರೊಸೆಸರ್ ಹೊಂದಿದ್ದು, 128 GB ಮತ್ತು 256GBಯ ಎರಡು ವಿಭಿನ್ನ ಇಂಟೆನಲ್ ಸ್ಟೋರೇಜ್ ಆಯ್ಕೆಯೊಂದಿಗೂ ಬರುತ್ತದೆ. ಈ ಸ್ಮಾರ್ಟ್‌ಫೋನ್ ಇನ್ ಡಿಸ್‌ಪ್ಲೇ ಫಿಂಗರ್‌ಪ್ರಿಂಟ್ ಸೆನ್ಸರ್ ಅನ್ನು ಹೊಂದಿದೆ ಮತ್ತು ಇದು 67ಘ ವೇಗದ ಚಾರ್ಜಿಂಗ್ ಬೆಂಬಲದೊಂದಿಗೆ 5000 ಟಿಯ ಬ್ಯಾಟರಿಯೊಂದಿಗೆ ಬರುತ್ತದೆ.

**ಬೆಲೆ ಎಷ್ಟು...?**

ಇಷ್ಟೆಲ್ಲಾ ವಿಶೇಷತೆ ಇರುವ ಸ್ಮಾರ್ಟ್‌ಫೋನ್‌ನ ಬೆಲೆ ಎಷ್ಟು ಎಂಬ ಕುತೂಹಲ, ಪ್ರಶ್ನೆ ಖಂಡಿತಾ ಎಲ್ಲರಿಗೂ ಇರುತ್ತದೆ. ಹೊಸ ಒಪ್ಪೋ ಎಫ್ 27 ಪ್ರೋ + 5ಜಿ ಎರಡು ರೂಪಾಂತರಗಳಲ್ಲಿ ಸಿಗುತ್ತದೆ. ಒಂದು 8GB+128GB ರೂಪಾಂತರ. ಇದರ ಬೆಲೆ 27,999 ರೂಪಾಯಿ. ಇನ್ನೊಂದು 8GB+256GB ವೇರಿಯೆಂಟ್. ಈ ರೂಪಾಂತರದ ಬೆಲೆ 29,999 ರೂಪಾಯಿ. ಇನ್ನು ಬಣ್ಣದ ಆಯ್ಕೆಯ ವಿಷಯ ಬಂದರೆ ಈ ಸ್ಮಾರ್ಟ್‌ಫೋನ್ ಡಸ್ಕ್ ಪಿಂಕ್ ಮತ್ತು ಮಿಡ್ನೈಟ್ ನೇವಿ ಬಣ್ಣದ ಆಯ್ಕೆಗಳಲ್ಲಿ ಸಿಗುತ್ತದೆ.

# ಗ್ರಾಮ ಲೆಕ್ಕಿಗರು 1,000 ಹಾಗೂ 750 ಜನ ಸರ್ವೇಯರ್ ಭರ್ತಿ ಸಚಿವ ಕೃಷ್ಣಭೈರೇಗೌಡ

**ಬೆಂಗಳೂರು :**
ಸರ್ವೇ ಇಲಾಖೆಯಲ್ಲಿ ಹಲವಾರು ಸಮಸ್ಯೆಗಳಿದ್ದು, ಇದರಿಂದ ರೈತರು ಸಂಕಷ್ಟಕ್ಕೀಡಾಗಿರುವುದು ನಮ್ಮ ಗಮನದಲ್ಲಿದೆ. ಅಲ್ಲದೆ, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.

ವಿಧಾನಸಭೆ ಪ್ರಶ್ನೋತ್ತರ ಅವಧಿಯ ವೇಳೆ ರಾಯಭಾಗ ಕ್ಷೇತ್ರದ ಬಿಜೆಪಿ ಶಾಸಕ ಐಹೊಳೆ ದುರ್ಯೋಧನ ಮಹಾಲಿಂಗಪ್ಪ ಅವರು ಸರ್ವೇ ಇಲಾಖೆ ಸಮಸ್ಯೆಗಳ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, "ಸರ್ವೇ ಇಲಾಖೆಯಲ್ಲಿ ಸಾಕಷ್ಟು ಸಮಸ್ಯೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನತಾ ದರ್ಶನ ಕಾರ್ಯಕ್ರಮದಲ್ಲೂ ಸರ್ವೇ ಇಲಾಖೆಗೆ ಸಂಬಂಧಿಸಿದಂತೆ ಸಾಕಷ್ಟು ದೂರುಗಳು ಬರುತ್ತಿವೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಲಾಗುತ್ತಿದೆ ಎಂದು ಅವರು ವಿವರಿಸಿದರು.


**ಗ್ರಾಮ ಲೆಕ್ಕಿಗರು 1,000 ಹಾಗೂ 750 ಜನ ಸರ್ವೇಯರ್ ಭರ್ತಿ:**

ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಯ ಬಗ್ಗೆ ವಿಧಾನಸಭೆಗೆ ಮಾಹಿತಿ ನೀಡಿದ ಸಚಿವ ಕೃಷ್ಣ ಬೈರೇಗೌಡ ಅವರು, "ರಾಜ್ಯದಲ್ಲಿ 1,000 ಗ್ರಾಮ ಆಡಳಿತಾಧಿಕಾರಿಗಳು ಹಾಗೂ 750 ಸರ್ಕಾರಿ ಸರ್ವೇಯರ್ ಭರ್ತಿ ಪ್ರಕಿಯೆ ನಡೆದಿದೆ. ಇದರ ಜೊತೆಗೆ 100ಕ್ಕೂ ಅಧಿಕ ಪರವಾನಗಿ ಹೊಂದಿರುವ ಖಾಸಗಿ ಸರ್ವೇಯರ್ ಹಾಗೂ 35 ಎ.ಡಿ.ಎಲ್.ಆರ್ ನೇಮಕಾತಿಗೆ ಅರ್ಜಿ ಕರೆಯಲಾಗಿದೆ. ಮುಂದಿನ 3 ರಿಂದ 6 ತಿಂಗಳ ಒಳಗಾಗಿ ಈ ಎಲ್ಲಾ ಹುದ್ದೆಗಳನ್ನೂ ನ್ಯಾಯಸಮ್ಮತವಾಗಿ ಭರ್ತಿ ಮಾಡುವಂತೆ ಕೆಪಿಎಸ್‌ಸಿ ಗೆ ಸೂಚಿಸಲಾಗಿ ಎಂದು ತಿಳಿಸಿದರು.

ಮುಂದುವರೆದು, "ಸರ್ವೇ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿದರೆ ಸ್ವಾಭಾವಿಕವಾಗಿ ಸರ್ವೇ ಇಲಾಖೆಗೆ ಬಲ ಬರಲಿದೆ. ಈ ಹುದ್ದೆಗಳಲ್ಲದೆ, ಹೆಚ್ಚುವರಿಯಾಗಿ ಹೊಸ ಹುದ್ದೆಗಳ ಸೃಷ್ಟಿಗೂ ಮುಖ್ಯಮಂತ್ರಿಗಳ ಬಳಿ ಮನವಿ ಸಲ್ಲಿಸಿದ್ದು ಮತ್ತಷ್ಟು ಹುದ್ದೆಗಳನ್ನು ಸೃಷ್ಟಿಸಲು ಸರ್ಕಾರ ಸಿದ್ದವಾಗಿದೆ. ಇದರ ಜೊತೆಗೆ ನಮ್ಮ ಸಿಬ್ಬಂದಿಗಳ ಕೆಲಸದ ವೇಗ ಹೆಚ್ಚಾಗಲು ಮೂರು ಪಟ್ಟು ಸರ್ವೇ ಕೆಲದ ವೇಗ ಪಡೆಯಲು ಆಧುನಿಕ ಉಪಕರಣವಾದ ರೋವರ್ ಬಳಸಿ ಸರ್ವೇ ನಡೆಸಲೂ ಸೂಚಿಸಲಾಗಿದೆ. ಈ ಮೂಲಕ ರೈತರ ಸಮಸ್ಯೆಗಳನ್ನು ಬಗೆಹರಿಸುವ ಹಾಗೂ ಸರ್ವೇ ಇಲಾಖೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧವಾಗಿದೆ ಎಂದರು.

**ಅರಗ ಜ್ಞಾನೇಂದ್ರರ ಪ್ರಶ್ನೆಗೆ ಸಚಿವರ ಖಡಕ್ ಉತ್ತರ:**

ಸಚಿವ ಕೃಷ್ಣ ಬೈರೇಗೌಡ ಅವರು ಉತ್ತರಿಸುತ್ತಿದ್ದ ವೇಳೆ ಮದ್ಯಪ್ರವೇಶಿಸಿದ ಬಿಜೆಪಿ ಶಾಸಕ ಮಾಜಿ ಗೃಹ ಸಚಿವರಾದ ಅರಗ ಜ್ಞಾನೇಂದ್ರ ಅವರು, "ಮಲೆನಾಡಿನ ರೈತರ ಸಮಸ್ಯೆ ಬೆಂಗಳೂರಿನಿಂದ ತೇರ್ಗಡೆಯಾಗಿ ಹೋದ ಸರ್ವೇಯರ್ಗೆ ಗೊತ್ತಾಗೋದೆ ಇಲ್ಲ. ಇಷ್ಟಕ್ಕೂ ಅವರು ಬೆಂಗಳೂರಿನಿಂದ ಹೊರಟು ಮಲೆನಾಡಿಗೆ ಬಂದು ತಲುಪುವುದರ ಒಳಗಾಗಿ ಡೆಪ್ಯುಟೇಷನ್ ಮೇಲೆ ಮತ್ತೆ ಬೆಂಗಳೂರಿಗೆ ಹಿಂತಿರುಗುತ್ತಾರೆ ಎಂದು ಆರೋಪಿಸಿದರು. ಈ ಆರೋಪಕ್ಕೆ ಖಡಕ್ ಆಗಿಯೇ ಉತ್ತರ ಕೊಟ್ಟ ಸಚಿವ ಕೃಷ್ಣ ಬೈ-ರೇಗೌಡ ಅವರು, "ಕಳೆದ ಒಂದು ವರ್ಷದಲ್ಲಿ ನಾನು ವ್ಯಯಕ್ತಿಕವಾಗಿ ಒಂದೇ ಒಂದು ಕೇಸ್ ಕೂಡ ಡೆಪ್ಯುಟೇಶನ್ ಮಾಡಿಲ್ಲ. ಡೆಪ್ಯುಟೇಷನ್ ಎನ್ನುವ ಮಾತೇ ಇಲ್ಲ. ಅಲ್ಲದೆ, ಡೆಪ್ಯುಟೇಷನ್ ಮೇಲೆ ಇತರೆಡೆ ಹೋದ ಅಧಿಕಾರಿಗಳನ್ನೂ ಸಹ ಹಿಂದಕ್ಕೆ ವಾಪಸ್ ಕರೆಸಲಾಗಿದೆ" ಎಂದು ಮಾಹಿತಿ ನೀಡಿದರು.



# ಅಡುಗೆ ತಯಾರಿಸುವ ಮತ್ತು ಸ್ವಚ್ಚತೆ ಕಾಪಾಡುವ ಕುರಿತು ಕಾರ್ಯಾಗಾರದ ಸಮಾರೋಪ ಸಮಾರಂಭ



**ರಾಯಚೂರು,** ಜಿಲ್ಲೆಯ ಹಾಸ್ಟೆಲ್‌ಗಳ ಅಡುಗೆ ತಯಾರಿಸುವ ಸಿಬ್ಬಂದಿಗಳು ಸರಿಯಾಗಿ ಕೈ ತೊಳೆಯುವ ನಿಯಮಗಳನ್ನು ಪಾಲಿಸುವ ಮೂಲಕ ಮಕ್ಕಳ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸಬೇಕೆಂದು ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ.ಗಣೇಶ ಅವರು ಹೇಳಿದರು.

ಅವರು ಜು.14ರ ರವಿವಾರ ದಂದು ನಗರದ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ್ ರಾಮ್ ಅವರು ಸಮುದಾಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಮಾಜ ಕಲ್ಯಾಣ ಇಲಾಖೆ ಮತ್ತು ಅಧೀನದಲ್ಲಿರುವ ಕ್ರೈಸ್ತ ವಸತಿ ಶಾಲೆಗಳ ಖಾಯಂ ಅಥವಾ ಹೊರಸಂಪನ್ಮೂಲ ಡಿ-ಗ್ರೂಪ್ ಸಿಬ್ಬಂದಿಗಳಿಗೆ ಅಡುಗೆ ತಯಾರಿಸುವ ಮತ್ತು ಸ್ವಚ್ಚತೆಯನ್ನು ಕಾಪಾಡುವ ಕುರಿತು ಎರಡು ದಿನಗಳ ತರಬೇತಿ ಕಾರ್ಯಾಗಾರದ ಸಮಾರೂಪ ಸಮಾರಂಭದ ಕಾರ್ಯಕ್ರಮದಲ್ಲಿ ಮಾತನಾಡಿ, ಕೈ ತೊಳೆಯುವ ನಿಯಮಗಳನ್ನು ಪ್ರಾಯೋಗಿಕವಾಗಿ ತೋರಿಸುವದರೊಂದಿಗೆ ಮಕ್ಕಳ ಆರೋಗ್ಯದ ಕಡೆ ಹೇಗೆ ಗಮನಹರಿಸಬೇಕು ಎಂದರು.

ಡೆಂಗ್ಯೂ ಜ್ವರವನ್ನು ನಿಯಂತ್ರಿಸಲು ಯಾವುದೇ ಜ್ವರವಿದ್ದರೂ ಮೊದಲು ರಕ್ತ ಪರೀಕ್ಷೆ ಮಾಡಿಸಬೇಕು. ಹಾಸ್ಟೆಲ್‌ನ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನಾಲೆಗಳಲ್ಲಿ ಕಸಕಡ್ಡಿಗಳನ್ನು ಎಸೆಯದೇ ನೀರಿನ ಸರಾಗವಾದ ಹರಿಯುವಿಕೆಗೆ ತಡೆಯಾಗದಂತೆ ನೋಡಿಕೊಳ್ಳಬೇಕು. ಹಾಸ್ಟೆಲ್‌ನಲ್ಲಿ ನೀರು ಸಂಗ್ರಹಣಾ ಪಾತ್ರೆಗಳು ಮತ್ತು ಡ್ರಮ್‌ಗಳನ್ನು ಸರಿಯಾದ ಮುಚ್ಚಳದಿಂದ ಮುಚ್ಚಿರಿ ಹಾಗೂ ದೊಡ್ಡ ತೊಟ್ಟಿಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಖಾಲಿ ಮಾಡಿ, ಸರಿಯಾಗಿ ಮುಚ್ಚಿರಿ ಅಥವಾ ಸೊಳ್ಳೆ ನಿಯಂತ್ರಣ ಜಾಲರಿಗಳನ್ನು ಅಳವಡಿಸಬೇಕೆಂದು ಹಾಸ್ಟೆಲ್ ಸಿಬ್ಬಂದಿಗಳಿಗೆ ತಿಳಿಸಿದರು.

ಈ ವೇಳೆ ಜಿಲ್ಲಾ ಆಹಾರ ಸುರಕ್ಷಿತಾ ಅಧಿಕಾರಿ ಗುರುರಾಜ ಅವರು ಮಾತನಾಡಿ, ನಾನು ವಿದ್ಯಾರ್ಥಿಯಾಗಿದಾಗ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದಲ್ಲಿ ಓದಿ ಈ ಮಟ್ಟದಕ್ಕೆ ಬಂದಿದ್ದೇನೆ ಎಂದರು.

ಜಿಲ್ಲಾ ಕಾರ್ಮಿಕ ಇಲಾಖೆಯ ಅಧಿಕಾರಿ ಮಂಜುನಾಥ್ ಅವರು ಮಾತನಾಡಿ, ಕಾರ್ಮಿಕರಿಗೆ ಇರುವ ವಿವಿಧ ಸೌಲಭ್ಯಗಳ ಕುರಿತು ವಿವರಿಸಿದರು. ಈ ವೇಳೆ ಮಧ್ಯಾಹ್ನ ಉಪಹಾರ ಯೋಜನೆಯ ಅಧಿಕಾರಿ ಈರಣ್ಣ ಕೋಸಗಿ ಅವರು ಮಾತನಾಡಿ, ಅಡುಗೆ ಸಿಬ್ಬಂದಿಯವರು ಸಾಮಾನ್ಯವಾಗಿ ಮಾಡುವ ತಪ್ಪುಗಳು ಮತ್ತು ಅದಕ್ಕೆ ಪರಿಹಾರ ಉಪಾಯಗಳನ್ನು ನೀಡಿದರು. ಈ ವೇಳೆ ಮಧ್ಯಾಹ್ನ ಅವಧಿಯಲ್ಲಿ ಅಡುಗೆ ತಯಾರಿಸುವ ತಜ್ಞರಿಂದ ಎಲ್ಲ ಸಿಬ್ಬಂದಿಗಳಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಮಹೇಶ್ ಪೋತದಾರ್ ಅವರು ವಹಿಸಿ ಮಾತನಾಡಿ, ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರ ಕರ್ತವ್ಯಗಳ ಬಗ್ಗೆ ಸಮಗ್ರವಾಗಿ ವಿವರಿಸಿ, ಶುಚಿ-ರುಚಿಯಾಗಿ ಅಡುಗೆ ತಯಾರಿಸುವ ವಿಧಾನಗಳನ್ನು ಮನಮುಟ್ಟುವಂತೆ ವಿವರಿಸಿದರು.

ಇದೇ ಸಂದರ್ಭದಲ್ಲಿ ಪತ್ರಾಂಕಿತ ವ್ಯವಸ್ಥಾಪರಾದ ಬೇಬಿ ಹುಲ್ಸ್‌ವಾರ, ಸಮಾಜ ಕಲ್ಯಾಣ ಇಲಾಖೆಯ ತಾಲೂಕ ಮಟ್ಟದ ಅಧಿಕಾರಿಗಳು, ವಸತಿ ನಿಲಯ ಪಾಲಕರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಇದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಶೈಲ್ ಅವರು ಮಾಡಿದರು.

# ಬೆಳಗಾವಿಯಲ್ಲಿ ಮೆಡಿಕಲ್ ಸೀಟ್ ಕೊಡಿಸುವುದಾಗಿ ನಂಬಿಸಿ ಕೋಟ್ಯಾಂತರ ವಂಚನೆ : ಓರ್ವನ ಬಂಧನ

**ಬೆಳಗಾವಿ :** ಇತ್ತೀಚ್ಚಿಗೆ ನೀಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ಭಾರಿ ಸದ್ದು ಮಾಡಿದ್ದೂ, ಇದೀಗ ನೀಟ್ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದುಕೊಂಡರು ಕೂಡ ಸೀಟ್ ಕೊಡಿಸುವುದಾಗಿ ನಂಬಿಸಿ ಕೋಟ್ಯಂತರ ರೂಪಾಯಿ ವಂಚಿಸಿರುವ ಘಟನೆ ಬೆಳಗಾವಿಯಲ್ಲಿ ನಡೆದಿದೆ.

ನೀಟ್ ಪರೀಕ್ಷೆ ಬರೆದ ವಿದ್ಯಾರ್ಥಿಗಳನ್ನ ಟಾರ್ಗೆಟ್ ಮಾಡಿ ಕಡಿಮೆ ಅಂಕ ಪಡೆದುಕೊಂಡವರಿಗೆ ಮೆಡಿಕಲ್ ಸೀಟ್ ಕೊಡಿಸುವುದಾಗಿ ನಂಬಿಸಿ ವಂಚಿಸುತ್ತಿದ್ದ ಅಂತಾರಾಜ್ಯ ವಂಚಕನನ್ನು ಬೆಳಗಾವಿ ಮಾರ್ಕೆಟ್ ಪೊಲೀಸರು ಬಂಧಿಸಿದ್ದಾರೆ. ಬಂಧಿತನನ್ನು ಹೈದ್ರಾಬಾದ್ ಮೂಲದ ಅರವಿಂದ್ ಅರಗೊಂಡ ಎಂದು ತಿಳಿದುಬಂದಿದೆ.

ಬೆಳಗಾವಿ ಮೂಲದ ಓರ್ವ ವಿದ್ಯಾರ್ಥಿ ತಾಯಿ ನೀಡಿದ ದೂರಿನನ್ವಯ ಆರೋಪಿಯನ್ನು ಬಂಧಿಸಲಾಗಿದೆ. ತಾಂತ್ರಿಕ ಸಾಕ್ಷಿಗಳ ಆಧಾರದ ಮೇಲೆ ಆರೋಪಿಯನ್ನು ಖೆಡ್ಡಾಗೆ ಬೀಳಿಸಲಾಗಿದೆ. ಬಂಧಿತ ಆರೋಪಿಯಿಂದ 12 ಲಕ್ಷ ರೂ. ನಗದು, ಕೃತ್ಯಕ್ಕೆ ಬಳಸಿದ್ದ 12 ಕಂಪ್ಯೂಟರ್, ಒಂದು ಲ್ಯಾಪ್ ಟಾಪ್ ಜಪ್ತಿ ಮಾಡಲಾಗಿದೆ.

2023ರಲ್ಲಿ ಬೆಳಗಾವಿಯಲ್ಲಿ ಅರವಿಂದ್ ನೀಟ್ ಕೌನ್ಸೆಲಿಂಗ್ ಸೆಂಟರ್ ಓಪನ್ ಮಾಡಿದ್ದ. ಹತ್ತು ಜನ ಟೆಲಿ ಕಾಲರ್ಸ್ ನೇಮಕ ಮಾಡಿಕೊಂಡು ವಂಚಿಸುತ್ತಿದ್ದ. ಕಡಿಮೆ ಅಂಕ ಪಡೆದವರಿಗೆ ಫೋನ್ ಮೂಲಕ ಸಂಪರ್ಕಿಸಿ ಮೆಡಿಕಲ್ ಸೀಟ್ ಕೊಡಿಸುವುದಾಗಿ ವಿದ್ಯಾರ್ಥಿಗಳು ಸೇರಿದಂತೆ ಪೋಷಕರಿಗೆ ಭರವಸೆ ನೀಡಿ ಮಕ್ಮಲ್ ಟೋಪಿ ಹಾಕಿದ್ದಾನೆ. ಬಳಿಕ ಕಚೇರಿ ಬಂದ್ ಮಾಡಿ ಮುಂಬೈಗೆ ಪರಾರಿಯಾಗಿದ್ದಾನೆ.

# ಉಡುಪಿಯಲ್ಲಿ ಅಗ್ನಿ ಅವಘಡ: ಶೆಟ್ಟಿ ಬಾರ್ & ರೆಸ್ಟೋರೆಂಟ್‌ನ ಮಾಲೀಕ ಸಜೀವ ದಹನ





**ಉಡುಪಿ,** ಉಡುಪಿ ನಗರದ ಬಾರ್ ಮಾಲಕರೊಬ್ಬರ ಮನೆಯಲ್ಲಿ ನಡೆದ ಬೆಂಕಿ ಅವಘಡದಲ್ಲಿ ಬಾರ್ ಮಾಲೀಕ ಸಾವನ್ನಪ್ಪಿದ್ದು, ಅವರ ಪತ್ನಿ ಗಂಭೀರ ಗಾಯಗೊಂಡ ಘಟನೆ ಇಂದು ಮುಂಜಾನೆ ಸಂಭವಿಸಿದೆ.

ಉಡುಪಿ ನಗರದ ಅಂಬಲಪಾಡಿಯ ಶೆಟ್ಟಿ ಬಾರ್ & ರೆಸ್ಟೋರೆಂಟ್‌ನ ಮಾಲೀಕರ ಮನೆಯಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಬೆಂಕಿಯ ಕೆನ್ನಾಲಿಗೆಗೆ ಸಿಲುಕಿದ ಬಾರ್ ಮಾಲೀಕ ರಮಾನಂದ ಗಂಭೀರವಾಗಿ ಗಾಯಗೊಂಡಿದ್ದರು.

ಕೂಡಲೇ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೇ ರಮಾನಂದ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಘಟನೆಯಲ್ಲಿ ರಮಾನಂದ ಅವರ ಪತ್ನಿ ಅಶ್ವಿನಿ ಅವರಿಗೂ ಗಂಭೀರ ಗಾಯವಾಗಿದ್ದು, ಮಣಿಪಾಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಅಗ್ನಿ ಶಾಮಕ ದಳದ ಸಿಬ್ಬಂದಿ ದೌಡಾಯಿಸಿದ್ದು, ಬೆಂಕಿ ಆರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಘಟನೆಯಲ್ಲಿ ಮನೆಯೊಳಗೆ ಬೆಂಕಿಯಲ್ಲಿ ಸಿಲುಕಿಕೊಂಡಿದ್ದವರ ರಕ್ಷಣೆ ಮಾಡಲಾಗಿದೆ. ಮನೆಗೆ ಬೆಂಕಿ ತಗುಲಿದ ಕಾರಣ ಈವರೆಗೂ ತಿಳಿದು ಬಂದಿಲ್ಲ.

# ವಿದ್ಯಾರ್ಥಿಗಳು ಆರೋಗ್ಯ ಕಾಳಜಿ ರೂಢಿಸಿಕೊಳ್ಳುವುದು ಅವಶ್ಯಕ -ಜಾನಕಿ

**ಮೂಡಲಗಿ:-**

ತಾಲೂಕಿನ ಮುನ್ಯಾಳ ಗ್ರಾಮದಲ್ಲಿ ಎನ್.ಎಸ್.ಎಸ್ ವಾರ್ಷಿಕ ಶಿಬಿರದಲ್ಲಿ ಸುತ್ತಲಿನ ಪರಿಸರ ಹಾಗೂ ಆರೋಗ್ಯದ ಜಾಗೃತಿ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳು ಆರೋಗ್ಯ ಕಾಳಜಿ ರೂಢಿಸಿಕೊಳ್ಳುವುದು
ಅವಶ್ಯವಿದೆ ಇಂದು ಮೊಬೈಲ್ ಎಂಬ ಸಾಧನ ಮಕ್ಕಳ ಮಾನಸಿಕ ನೆಮ್ಮದಿ ಮತ್ತು ಆರೋಗ್ಯ ಹಾಳು ಮಾಡುತ್ತಿದ್ದು ಅಲ್ಲದೇ ಅನೇಕ ದುಶ್ಚಟಗಳಿಗೆ ಕಾರಣವಾಗುತ್ತಿದೆ ಮೊಬೈಲ್ ಬಳಿಕೆ ಕಡಿಮೆ ಮಾಡಬೇಕು ಮತ್ತು ಮದ್ಯ, ಡ್ರಗ್ಸ್, ಧೂಮಪಾನದಂತಹ ಮಾದಕ ವ್ಯಸನಿ ಚಟುಗಳು ಯುವ
ವಿದ್ಯಾರ್ಥಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು ಅದರಿಂದ ಇಂದಿನ ಯುವಕರು ತಮ್ಮ ಆರೋಗ್ಯವನ್ನು ಹಾನಿಮಾಡಿಕೊಳ್ಳುತ್ತಿದ್ದಾರೆ ಇಂತಹ ಚಟಗಳಿಂದ ದೂರ ಇದ್ದು ತಮ್ಮ ವೈಯಕ್ತಿಕ ಆರೋಗ್ಯ ಕಾಪಾಡಿಕೊಳ್ಳಲು ಹೆಚ್ಚಿನ ಆದ್ಯತೆ ನೀಡಬೇಕೆಂದು ಹಳ್ಳೂರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಹಾಯಕಿ ಜಾನಕಿ ಹೇಳಿದರು.ಅವರು ಪಟ್ಟಣದ ಆರ್‌ಡಿಎಸ್ ಕಲಾ ವಾಣಿಜ್ಯ ವಿಜ್ಞಾನ ಹಾಗೂ ಸಮಾಜಕಾರ್ಯ
ಪದವಿ ಮಹಾವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೋಶದ ವತಿಯಿಂದ ಸಮೀಪದ ದತ್ತು ಗ್ರಾಮ ಮುನ್ಯಾಳದಲ್ಲಿ ಹಮ್ಮಿಕೊಂಡ ಎನ್.ಎಸ್.ಎಸ್. ವಾರ್ಷಿಕ ಶಿಬಿರವದಲ್ಲಿ ಉಪನ್ಯಾಸ
ಕಾರ್ಯಕ್ರಮದಲ್ಲಿ ಮಾತನಾಡಿ ವಿದ್ಯಾರ್ಥಿಗಳು ವೈಯಕ್ತಿಕ
ಆರೋಗ್ಯದ ಜೊತೆಗೆ ಸುತ್ತಲಿನ ಪರಿಸರದ ಸ್ವಚ್ಚತೆಗೊ ಹೆಚ್ಚಿನ
ಆದ್ಯತೆ ನೀಡವಲ್ಲಿ ಗಮನ ಹರಿಸಬೇಕು ತಂದೆ ತಾಯಿಗಳು ತಮ್ಮ ಮಕ್ಕಳ ಆರೋಗ್ಯದ ಕಡೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಒಳ್ಳೆಯ ವಿದ್ಯಾವಂತ ಮತ್ತು ಸುಸ್ಕೃಂತ ಪ್ರಜೆಯನ್ನಾಗಿ ತಯಾರಾಗುವಂತೆ ಇಂದಿನ ದಿನಗಳಲ್ಲಿ ಗಮನ ಹರಿಸುವುದು ಅಗತ್ಯವಿದೆ ಎಂದರು. ಮುನ್ಯಾಳ ಗ್ರಾಮ ಪಂಚಾಯತ ಸದಸ್ಯರಾದ ಅಂಬರೀಶ ವೆ ನಾಯ್ಕ ಮಾತನಾಡಿ ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಇದೆ ನಾವೂ ಸೇವಿಸುವ ಆಹಾರ ನಾವೂ ಇರುವ ಪರಿಸರ ಉತ್ತಮವಾಗಿದ್ದರೆ ಒಳ್ಳೆಯ ಆರೋಗ್ಯ ಹೊಂದಲು ಸಾಧ್ಯವಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.ಆಯ್.ಟಿ.ಆಯ್ ಕಾಲೇಜು ಪ್ರಾಚಾರ್ಯ ಚಿದಾನಂದ ಶೆಟ್ಟರ ಉಪನ್ಯಾಸಕ ಡಾ.ಪ್ರಶಾಂತ್ ಮಾವರಕರ ಪ್ರಾಸ್ತಾವಿಕವಾಗಿ ಮಾತನಾಡಿದರು
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜು ಉಪಪ್ರಾಚಾರ್ಯ ಗೀತಾ ಹಿರೇಮಠ ವಹಿಸಿಕೊಂಡು ಮಾತನಾಡಿ ನಮ್ಮ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ನಾವೂ ಅನುಸರಿಸುವ ಆರೋಗ್ಯದಾಯಿಕ ಮಾರ್ಗಗಳೇ ಸ್ಪೂರ್ತಿಯಾಗುತ್ತೇವೆ ಎಂದರು.ಕಾರ್ಯಕ್ರಮದಲ್ಲಿ ಮುತ್ತಣ್ಣ ವಡೇರ, ಶಿವಾನಂದ ಬಿಳ್ಳೂರ, ರಮೇಶ ಪಾಟೀಲ, ಲಗ್ಮಣ್ಣ ಗೋಣಿ, ಸಂಜು ಹಿರೇಹೊಳಿ, ಸಿದ್ದಾರೂಡವಡೇರ.ಮಂಜುಳಾ ಮುರಗೋಡ ಎನ್.ಎಸ್.ಎಸ್. ಸಹಶಿಬಿರಾಧಿಕಾರಿ ಉಪನ್ಯಾಸಕ ರಾಜು ಪತ್ತಾರ ಇತರರು ಹಾಜರಿದ್ದರು. ಶಿಬಿರಾರ್ಥಿ ರೇಷ್ಮಾ ನದಾಫ ನಿರೂಪಿಸಿದರು ಶಿಬಿರಾರ್ಥಿ ಸೌಜನ್ಯ ಮೂಡಲಗಿ ಸ್ವಾಗತಿಸಿದರು ಶಿಬಿರಾರ್ಥಿ ಅಬುಬಕರ ಡಾಂಗೆ ವಂದಿಸಿದರು.




# ಗೃಹಲಕ್ಷ್ಮೀ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರಿಂದ ಅರ್ಜಿ ಆಹ್ವಾನ

**ಬೆಂಗಳೂರು ನಗರ ಜಿಲ್ಲೆ,** : ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ಅಥವಾ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳು ಗೃಹಲಕ್ಷ್ಮೀ ಯೋಜನೆಯಡಿ ಪ್ರಯೋಜನ ಪಡೆಯಲು ಅನುವಾಗುವಂತೆ ಗೃಹಲಕ್ಷ್ಮೀ ಯೋಜನೆಯ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ National Portal For Transgender Persons ವತಿಯಿಂದ ಪಡೆದಿರುವ ಲಿಂಗತ್ವ ಅಲ್ಪಸಂಖ್ಯಾತರ ಗುರುತಿನ ಚೀಟಿಯನ್ನು ಪರಿಗಣಿಸಲು ಸರ್ಕಾರವು ಅನುಮೋದನೆ ನೀಡಿ ತಂತ್ರಾಂಶದಲ್ಲಿ ಮಾರ್ಪಾಡು ಮಾಡಲಾಗಿದೆ. ಆದ್ದರಿಂದ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ಅಥವಾ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮ್ಕಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಸುಧಾರಣಾ ಸಂಕೀರ್ಣ, ಡಾ.ಎಂ. ಎಚ್. ಮರಿಗೌಡ ರಸ್ತೆ, ಬೆಂಗಳೂರು-560 029 ಇಲ್ಲಿ ಭೇಟಿ ನೀಡಿ ಗೃಹ ಲಕ್ಷ್ಮೀ ಯೋಜನೆ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಟ್ರಾನ್ಸ್‌ಜೆಂಡರ್ ಗುರುತಿನ ಚೀಟಿ, ಪಾಸ್ ಪೋರ್ಟ್ ಸೈಜ್ ಪೋಟೋ ಮತ್ತು ಆಧಾರ್ ಕಾರ್ಡ್‌ನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 080-29578688ಗೆ ಸಂಪರ್ಕಿಸಬಹುದು ಎಂದು ಬೆಂಗಳೂರು ನಗರ ಜಿಲ್ಲೆ, ಮಹಿಳಾ ಮತ್ತು ಮ್ಕಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಖಾಸಗಿ ವಿದ್ಯಾ ಸಂಸ್ಥೆಯಿಂದ ಸಾರ್ವಜನಿಕ ವಾಹನ ನಿಲ್ದಾಣ ಕಬಳಿಕೆ?ಸಾರ್ವಜನಿಕರ ಆಪಾದನೆ

**ದಾವಣಗೆರೆ:**

ದಾವಣಗೆರೆ ಮಹಾ ನಗರಪಾಲಿಕೆ ವ್ಯಾಪ್ತಿಯ 33(ಮೂವತ್ಮೂರ)ನೇ ವಾರ್ಡಿನಲ್ಲಿ ಸಾರ್ವಜನಿಕರ ವಿಶ್ರಾಂತಿಗಾಗಿ ಒಂದು ಪಾರ್ಕ್ ಇದೆ.ಈ ಪಾರ್ಕಿಗೆ ಬಂದುಹೋಗುವವರಿಗಾಗಿ ಪಾರ್ಕಿಗೆ ಹತ್ತಿಕೊಂಡಂತೆ ಅಂದಾಜು 20*80ಅಡಿಗಳಷ್ಟು ಜಾಗವನ್ನು ವಾಹನ ನಿಲ್ದಾಣಕ್ಕಾಗಿ ಬಿಟ್ಟಿದ್ದಾರೆ.ಈ ಭಾಗದ ಸಾರ್ವಜನಿಕರು ವೃದ್ಧರು,ವ ಿಕ್ಕಳು,ಮಹಿಳೆಯರು ಪಾರ್ಕಿಗೆ ಬಂದು ಹೋಗುತ್ತಾರೆ.ಸಾರ್ವಜನಿಕರು ಪಾರ್ಕ ಒಳಗೆ ಹೋಗುವಾಗ ತಮ್ಮ ವಾಹನಗಳನ್ನು ಪಾರ್ಕಗೇಟ್ ಹತ್ತಿರ ನಿಲ್ಲಿಸಿ ಹೋಗುತ್ತಾರೆ.ಇದು ಇಂದು ನಿನ್ನೆಯವಿಷಯವಲ್ಲಾ.ಮೊದಲಿನಿಂದಲೂ ಹೀಗೇ ಚಾಲ್ತಿಯಲ್ಲಿದೆ.

ಇದೇ ಪಾರ್ಕ್ ಹತ್ತಿರ ಪ್ರಭಾವಿಯೊಬ್ಬರ ಖಾಸಗಿ ವಿದ್ಯಾಸಂಸ್ಥೆ ಇರುತ್ತದೆ.ಈ ಪ್ರಭಾವಿ ವಿದ್ಯಾಸಂಸ್ಥೆಯ ವರು ಇದ್ದಕ್ಕಿದ್ದಂತೆ ಪಾರ್ಕಿಗೆ ಬಂದುಹೋಗುವ ಸಾರ್ವಜನಿಕರ ವಾಹನ ನಿಲ್ದಾಣವನ್ನು ಅತಿಕ್ರಮಣ ಮಾಡಿಕೊಂಡು ಗೇಟ್ ಅಳವಡಿಸಿಕೊಂಡು ಪಾರ್ಕಿಗೆ ಬರುವ ಸಾರ್ವಜನಿಕರ ವಾಹನ ನಿಲ್ದಾನ ಅಕ್ರಮಿಸಿಕೊಂಡಿದ್ದಾರೆಂದು ಆಪಾದಿಸಿದ್ದಾರೆ. ಈ ಭಾಗದ ಜನರು ತೊಂದರೆ ಅನುಭವಿಸುವಂತಾಗಿದೆ.ಈತ ಪ್ರಭಾವಿಯಾಗಿದ್ದು ಈತನ ಎದುರು ಧ್ವನಿ ಎತ್ತಲು ಜನರು ಹೆದರುವುದರಿಂದ ಈಗಾಗಲೇ ಪಾಲಿಕೆ ಆಯುಕ್ತರಾದ ರೇಣುಕಮ್ಮ ನವರಿಗೆ ಮತ್ತು ಎ.ಆರ್.ಓ.ಸುನಿಲ್ ರವರಿಗೆ ಮತ್ತು ಸ್ಥಳಿಯ ಪಾಲಿಕೆ ಸದಸ್ಯರಾದ ಶ್ರೀ ಬಿಎಸ್.ವಿರೇಶ್ ರವರ ಗಮನಕ್ಕೂ ತರಲಾಗಿದೆ.ಆದರೂ ಸಹ ಆತ ಪ್ರಭಾವಿ ಇರುವುದರಿಂದ ಈ ಅಧಿಕಾರಿವರ್ಗ ಆ ಕಬಳಿಕೆ ಜಾಗವನ್ನು ತೆರುವು ಗೊಳಿಸಲು ಹಿಂಜರಿಯುತಿದ್ದಾರೆ.

ಕೂಡಲೇ ಮೇಲಾಧಿಕಾರಿಗಳು ಇತ್ತ ಗಮನಹರಿಸಿ ಈ ಸಾರ್ವಜನಿಕ ಸ್ಥಳವನ್ನು ಪಾರ್ಕಿಗೆ ಬರುವ ಸಾರ್ವಜನಿಕರ ವಾಹನ ನಿಲ್ಣಾಣಕ್ಕೆ ಮೀಸಲಿಡಬೇಕು.ಇಲ್ಲವೆ ಈ ಭಾಗದಲ್ಲಿ ಶುದ್ಧ ಕುಡಿಯುವ ನೀರಿನ ಅಭಾವ ಇದ್ದು ಈ ಜಾಗದಲ್ಲಿ ಒಂದು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಬೇಕು.ಸಾರ್ವಜನಿಕರ ಸ್ವತ್ತು ಪ್ರಭಾವಿಗಳ ಅಕ್ರಮಣದಿಂದ ತೆರವುಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಬಳಕೆಮಾಡಬೇಕು. ಅಧಿಕಾರಿಗಳು ಕೂಡಲೇ ತೆರವುಗೊಳಿಸಬೇಕು.ತಡವಾದರೆ ಅದರಲ್ಲಿ ಭ್ರಷ್ಟ ಅಧಿಕಾರಿ ಮತ್ತು ಜನಪ್ರತಿನಿಧಿಗಳ ಪಾಲು ಇದೆ ಎಂದು ಯಾವುದೇ ಅನುಮಾನ ಪಡಬೇಕಾಗಿಲ್ಲವೆಂದು ಸಾರ್ವಜನಿಕರು ಎದ್ದು ಅಧಿಕಾರಿಗಳ ಬಳಿ ಬಾಗಿಲಿಗೆ ಬರುವ ಮೊದಲು ಸರಿಮಾಡಬೇಕೆಂದು ಈ ಭಾಗದ ಸಾರ್ವಜನಿಕರ ಒತ್ತಾಯವಾಗಿದೆ ಎಂದು ನಿವೃತ್ತ ಜೀವವಿಮಾನಿಗಮದ ಶ್ರೀ ರುದ್ರೇಶ್ ರವರು ಈ ಮೂಲಕ ಒತ್ತಾಯ ಪಡಿಸಿದ್ದಾರೆ.



# ವಿಶ್ವದ ಅಗ್ರಮಾನ್ಯ ಹೃದಯ ತಜ್ಞರಲ್ಲಿ ಒಬ್ಬರಾದ ಡಾ ದೇವಿಶೆಟ್ಟಿ ಯವರ ಸಂದೇಶ..

"ನನ್ನೆಲ್ಲಾ ಮಿತ್ರರೇ...
ಇತ್ತೀಚಿನ ಕೆಲ ವರ್ಷಗಳಿಂದ ನಾನು, ನನಗೆ ವೈಯಕ್ತಿಕವಾಗಿ ತೀರಾ ಪರಿಚಿತರಿದ್ದ 8–10 ಜನರನ್ನು ಕಳೆದು ಕೊಂಡಿದ್ದೇನೆ.. ಅದರಲ್ಲೂ 40 ರ ಆಸುಪಾಸಿನಲ್ಲಿದ್ದ ಕೆಲ ಸೆಲೆಬ್ರಿಟಿಗಳು 'ಫಿಟ್ ' ಆಗಿರಲು ಅತೀ ಹೆಚ್ಚು ಶ್ರಮಿಸಿ ಮರಣಿಸಿದ್ದಾರೆ.. ಆದರೆ ಅವರೆಲ್ಲಾ ಕೇವಲ ಫಿಟ್ ಆಗಿರುವಂತೆ, ಸಿಕ್ಸ್ ಪ್ಯಾಕ್ ಹೊಂದಿರುವಂತೆ ಕಾಣುತ್ತಿದ್ದರಷ್ಟೆ...

ಜೀವನದಲ್ಲಿ ಎಲ್ಲದಕ್ಕೂ 'ಮಿತ' ವೇ ಮಂತ್ರ.. ಸೊನ್ನೆ ಅಥವಾ ನೂರು ಈ ಎರಡರಲ್ಲಿ ಯಾವುದರ ಕಡೆಗಿನ ತೀವ್ರ ತುಡಿತವಿದ್ದರೂ ಅದು ತಪ್ಪು. ಒಂದಿಪ್ಪತ್ತು ನಿಮಿಷಗಳ ಕಾಲದ ಮಿತವಾದ ವ್ಯಾಯಾಮ, ಎಲ್ಲವನ್ನೂ ತಿನ್ನುವುದು, ಅತಿ ಪಥ್ಯ ಬೇಕಿಲ್ಲ.. ಕಿವಿ ಹಣ್ಣು.. ಆಲೀವ್ ಎಣ್ಣೆ.. ಇವೆಲ್ಲಾ ಅಲ್ಲ.. ನಿಮ್ಮ ಪೂರ್ವಜರು ಏನೆಲ್ಲಾ ತಿನ್ನುವುದನ್ನು ರೂಢಿ ಮಾಡಿದ್ದಾರೋ ಅಂತಹ ಸ್ಥಳೀಯ, ಆಯಾ ಋತುಮಾನದಲ್ಲಿ ಸಿಗುವ, ನಿಮ್ಮ ಊರಿನಲ್ಲೇ ಲಭ್ಯವಾಗುವ ಎಲ್ಲವನ್ನೂ ಮಿತವಾಗಿ ತಿನ್ನಿ.. ಪೂರ್ಣ ಏಳು ಗಂಟೆಗಳ ನಿದ್ರೆ ಮಾಡಿ.. ನಿಮ್ಮ ದೇಹವನ್ನು ಸ್ಟೀರಾಯ್ಡ್ ಅಥವಾ ಸಾಧನೆ ಹೆಚ್ಚಿಸುವ ಔಷಧಗಳನ್ನು ಸೇವಿಸದೇ ಗೌರವಿಸಿ.

ನೀವು ಏನೆಲ್ಲಾ ತಿನ್ನುತ್ತಾ ಬೆಳೆದಿರೋ ಅವನ್ನೇ ಮಿತ ಪ್ರಮಾಣದಲ್ಲಿ ತಿನ್ನಿ . ದಿನನಿತ್ಯ 20 ರಿಂದ 30 ನಿಮಿಷಗಳ ಕಾಲ ವ್ಯಾಯಾಮ, ಒಂದು ಉತ್ತಮ ನಡಿಗೆ.. ಇವಿಷ್ಟು ಸಾಕು.. ಎಲ್ಲಾ ರೀತಿಯ ಶಕ್ತಿವರ್ಧಕ, ಪೂರಕ ಆಹಾರ ನಿಲ್ಲಿಸಿ..ಕುಡಿಯುವ ಅಭ್ಯಾಸವಿದ್ದರೆ ವಾರಕ್ಕೆ ಕೆಲವು ಪೆಗ್ ಗಳಿಗಷ್ಟೇ ಸೀಮಿತಗೊಳಿಸಿ.. ಧೂಮಪಾನ ಬಿಡಲು ಸಾಧ್ಯವೇ ಇಲ್ಲ ಎನ್ನುವುದಾದರೆ ದಿನಕ್ಕೆ ಒಂದೆ–ರಡಕ್ಕೆ ಸೀಮಿತಗೊಳಿಸಿ. ನನ್ನ ಮಾತಿನ ಸಾರಾಂಶ ನಿಮಗೆ ಅರ್ಥವಾಗಿರಬೇಕು.. ಎಲ್ಲವೂ ಇರಲಿ.. ಮಿತವಾಗಿರಲಿ.. ನಿಮ್ಮ ನಿತ್ಯಕರ್ಮದಲ್ಲಿ ಸ್ವಲ್ಪ ಮೌನ ಧ್ಯಾನವನ್ನು ಸೇರಿಸಿಕೊಳ್ಳಿ. ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮ ದೇಹದ ಮಾತಿಗೆ ಕಿವಿಗೊಡಿ.. ಅದನ್ನು ಅರ್ಥಮಾಡಿ ಕೊಳ್ಳಿ..

40 ಕ್ಕೆ ನಿಮ್ಮ ದೇಹ ಸಾಕಷ್ಟು ಬದಲಾವಣೆಗೊಳಗಾಗುತ್ತದೆ, 50 ಕ್ಕೆ ಇನ್ನಷ್ಟು ಹೆಚ್ಚು.. 60 ಮೀರಿದೊಡನೆ ದೇಹ ಮಂದವಾಗತೊಡಗುತ್ತದೆ.. 70 ಮೀರಿದೊಡನೆ ಅಂತ್ಯಕ್ಕೆ ಅಣಿಗೊಳ್ಳಲಾರಂಭಿಸುತ್ತದೆ..80 ಮೀರಿತೆಂದರೆ ಪ್ರತಿ ವರ್ಷವೂ ಒಂದೊಂದು ಬೋನಸ್.. ಆದ್ದರಿಂದ ಅರವತ್ತು ಎಂದ–ರೆ ಹೊಸ ನಲವತ್ತು, ಐವತ್ತು ಎಂದರೆ ಹೊಸ ಮೂವತ್ತು, ಎನ್ನುವುದನ್ನೆಲ್ಲಾ ಬಿಟ್ಟು ಬಿಡಿ. ಅದು ಹಾಗಲ್ಲ..ನೀವು 40 ಅಥವಾ 50 ಮೀರಿ ಆರೋಗ್ಯವಂತರಾಗಿದ್ದರೆ ಅದಕ್ಕಾಗಿ ಧನ್ಯತೆ ಭಾವ ಹೊಂದಿರಿ.. ನಿಮ್ಮ ಹೃದಯದ ವೇಗಕ್ಕೆ ಹೊಂದುವಂತೆ ನಿಮ್ಮ ವೇಗವನ್ನೂ ವಯೋ ಮಾನಕ್ಕನುಗುಣವಾಗಿ ತಗ್ಗಿಸಿ ಸಂಯಮ ತೋರಿ. ನಿವೃತ್ತಿಯನ್ನು ಒಂದು ಸಕಾರಣಕ್ಕಾಗಿ ಸಲಹೆ ಮಾಡಲಾಗುತ್ತದೆ ಎಂಬುದನ್ನು ಅರಿಯಿರಿ.. ನೀವು ಹಿಂದೊಮ್ಮೆ ಸಹಿಸುತ್ತಿದ್ದ ಒತ್ತಡಗಳನ್ನು ಇದೀಗ ನಿಮ್ಮ ದೇಹ ಮತ್ತು ಮನಸ್ಸುಗಳು ಸಹಿಸಲಾರವು. ಹೊರಗಿನಿಂದ ನೀವು ಚೆನ್ನಾಗಿಯೇ ಕಾಣುತ್ತಿರಬಹುದು, ಅದಕ್ಕಾಗಿ ನಿಮ್ಮ ವಂಶವಾಹಿನಿಗೆ ಒಂದು ಕೃತಜ್ಞತೆ ಇರಲಿ.. ಆದರೆ ಒಳಗೆ, ನಿಮ್ಮ ಅಂಗಾಂಗಗಳಿಗೆ ವಯಸ್ಸಾಗುತ್ತಿದೆ....

ನೀವು 40 ಮೀರಿದ ವಯೋಮಾನದವರಾದರೆ ಈ ಮೇಲಿನದೆಲ್ಲಾ ಓದಿ. ಮೇಲೆ ತಿಳಿಸಿದ್ದಕ್ಕಿಂತ ತೀರಾ ಭಿನ್ನವಾದದ್ದನ್ನೇನಾದರೂ ನೀವು ಮಾಡುತ್ತಿದ್ದರೆ, ಈ ಕೂಡಲೇ ಬದಲಿಸಿ.. ನೀವು ಸಹಾ ಇನ್ನೊಂದು ಅಂಕಿ – ಅಂಶವಾಗಿ ಕೊನೆಯಾಗಲು ಬಯಸಲಾರಿರಿ ಎಂಬ ವಿಶ್ವಾಸ ನನಗಿದೆ." ಅಮೇರಿಕಾದಲ್ಲಿ ವೈದ್ಯಕೀಯ ಅಧಿಕಾರಿಗಳು ಪ್ರತಿಯೊಬ್ಬರಿಗೂ ಮತ್ತು ಎಲ್ಲರಿಗೂ ಸಹಾಯ ಮಾಡಲು ಇದನ್ನು ಕಳುಹಿಸಿದ್ದಾರೆ. ದಯವಿಟ್ಟು ಓದಿ ಮತ್ತು ನಿಮ್ಮ ಬಗ್ಗೆ ಕಾಳಜಿ ವಹಿಸಿ – ಡಾ. ಒಕಿರೆ.

ಕಿಡ್ನಿ ಕಾಯಿಲೆಯಿಂದ ಯುವಕರು ಯಾವ ಪ್ರಮಾಣದಲ್ಲಿ ಬಳಲುತ್ತಿದ್ದಾರೆ ಎಂಬುದು ಆತಂಕಕಾರಿ. ನಾನು ನಮಗೆ ಸಹಾಯ ಮಾಡುವಂತಹ ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿದ್ದೇನೆ. ದಯವಿಟ್ಟು ಕೆಳಗೆ ಓದಿ:

ಪ್ರಮುಖ – ಕಿಡ್ನಿ ಅತ್ಯುತ್ತಮವಾದುದನ್ನು ನಿರ್ಧರಿಸುತ್ತದೆ.

ಕೇವಲ ಎರಡು (2) ದಿನಗಳ ಹಿಂದೆ, ಮೂತ್ರಪಿಂಡದ ಕಾಯಿಲೆಯ ಪರಿಣಾಮವಾಗಿ ನೈಜೀರಿಯಾದ ನಟನ ನಿಧನದ ಸುದ್ದಿಯನ್ನು ನಾವೆಲ್ಲರೂ ಸ್ವೀಕರಿಸಿದ್ದೇವೆ.
ಸಾರ್ವಜನಿಕ ಕಾರ್ಯಗಳ ನಮ್ಮ ಸಚಿವರಾದ ಗೌರವಾನ್ವಿತ ಟೆಕೊ ಲೇಕ್ ಪ್ರಸ್ತುತ ಆಸ್ಪತ್ರೆಯಲ್ಲಿ ಮೂತ್ರಪಿಂಡದ ಸಮಸ್ಯೆಗಳೊಂದಿಗೆ ಲೈಫ್ ಸಪೋರ್ಟ್ ನ ಬೆಂಬಲ ದಲ್ಲಿದ್ದಾರೆ. ಮೂತ್ರಪಿಂಡದ ಕಾಯಿಲೆಯ ಈ ಭೀತಿಯನ್ನು ತಪ್ಪಿಸುವುದು ಹೇಗೆ ಎಂದು ನಾನು ನಿಮಗೆ ತೋರಿಸಲು ಬಯಸುತ್ತೇನೆ.

**ಇಲ್ಲಿ ಕಿಡ್ನಿ ಕಾಯಿಲೆಯ ಮೊದಲ 6 ಕಾರಣಗಳು:**

1. ಶೌಚಾಲಯಕ್ಕೆ ಹೋಗಲು ವಿಳಂಬ. ನಿಮ್ಮ ಮೂತ್ರವನ್ನು ನಿಮ್ಮ ಮೂತ್ರಕೋಶದಲ್ಲಿ ಹೆಚ್ಚು ಹೊತ್ತು ಇಡುವುದು ಕೆಟ್ಟ ಸಂಗತಿಯಾಗಿದೆ. ಪೂರ್ಣ ಬ್ಲಾ ಡರ್, ಬ್ಲಾಡರ್ ಹಾನಿಗೆ ಕಾರಣವಾಗಬಹುದು. ಮೂತ್ರಕೋಶದಲ್ಲಿ ಉಳಿಯುವ ಮೂತ್ರವು ಬ್ಯಾಕ್ಟೀರಿಯಾವನ್ನು ತ್ವರಿತವಾಗಿ ಗುಣಿಸುತ್ತದೆ. ಮೂತ್ರವು ಮೂತ್ರನಾಳ ಮತ್ತು ಮೂತ್ರಪಿಂಡಗಳಿಗೆ ಹಿಂತಿರುಗಿದ ನಂತರ, ವಿಷಕಾರಿ ವಸ್ತುಗಳು ಮೂತ್ರಪಿಂಡದ ಸೋಂಕು, ನಂತರ ಮೂತ್ರದ ಸೋಂಕು, ಮತ್ತು ನಂತರ ನೆಫ್ರೈಟಿಸ್ ಮತ್ತು ಯುರೇಮಿಯಾಗಳಿಗೆ ಕಾರಣವಾಗಬಹುದು. ಪ್ರಕೃತಿ ಕರೆ ಮಾಡಿದಾಗ – ಸಾಧ್ಯವಾದಷ್ಟು ಬೇಗ ಅದನ್ನು ಮಾಡಿ.

**2. ಹೆಚ್ಚು ಉಪ್ಪು ತಿನ್ನುವುದು. ನೀವು ಪ್ರತಿದಿನ 5.8 ಗ್ರಾಂ ಗಿಂತ ಹೆಚ್ಚಾಗಿ ಉಪ್ಪನ್ನು ಸೇವಿಸಬಾರದು.**

3. ಹೆಚ್ಚು ಮಾಂಸ ತಿನ್ನುವುದು. ನಿಮ್ಮ ಆಹಾರದಲ್ಲಿ ಹೆಚ್ಚು ಪ್ರೋಟೀನ್ ನಿಮ್ಮ ಮೂತ್ರಪಿಂಡಗಳಿಗೆ ಹಾನಿಕಾರಕವಾಗಿದೆ. ಪ್ರೋಟೀನ್ ಜೀರ್ಣಕ್ರಿಯೆಯು ಅಮೋನಿಯಾವನ್ನು ಉತ್ಪಾದಿಸುತ್ತದೆ – ಇದು ನಿಮ್ಮ ಮೂತ್ರಪಿಂಡಗಳಿಗೆ ಬಹಳ ಹಾನಿಕಾರಕವಾಗಿದೆ. ಹೆಚ್ಚು ಮಾಂಸವು ಹೆಚ್ಚು ಮೂತ್ರಪಿಂಡದ ಹಾನಿಗೆ ಸಮನಾಗಿರುತ್ತದೆ.

4. ಹೆಚ್ಚು ಕೆಫೀನ್ ಕುಡಿಯುವುದು. ಕೆಫೀನ್ ಅನೇಕ ಸೋಡಾಗಳು ಮತ್ತು ತಂಪು ಪಾನೀಯಗಳ ಒಂದು ಅಂಶವಾಗಿದೆ. ಇದು ನಿಮ್ಮ ರಕ್ತದೊತ್ತಡವನ್ನು ಹೆಚ್ಚಿಸುತ್ತದೆ ಮತ್ತು ನಿಮ್ಮ ಮೂತ್ರಪಿಂಡಗಳು ಬಳಲುವುದಕ್ಕೆ ಎಡೆ ಯಗಿದೆ. ಆದ್ದರಿಂದ ನೀವು ಪ್ರತಿದಿನ ಕುಡಿಯುವ ಕೋಕ್ ಪ್ರಮಾಣವನ್ನು ಕಡಿತಗೊಳಿಸಬೇಕು.

5. ನೀರು ಕುಡಿಯುವುದಿಲ್ಲ. ನಮ್ಮ ಮೂತ್ರಪಿಂಡಗಳು ಅವುಗಳ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸಲು ಸರಿಯಾಗಿ ಹೈಡ್ರೀಕರಿಸಬೇಕು. ನಾವು ಸಾಕಷ್ಟು ಕುಡಿಯದಿದ್ದರೆ, ಮೂತ್ರಪಿಂಡಗಳ ಮೂಲಕ ಹರಿಯುವಷ್ಟು ದ್ರವವಿಲ್ಲದ ಕಾರಣ ವಿಷವು ರಕ್ತದಲ್ಲಿ ಸಂಗ್ರಹಗೊಳ್ಳಲು ಪ್ರಾರಂಭಿಸಬಹುದು. ಪ್ರತಿದಿನ 10 ಗ್ಲಾಸ್ ಗಿಂತ ಹೆಚ್ಚು ನೀರು ಕುಡಿಯಿರಿ. ನೀವು ಕುಡಿಯುತ್ತೀರಾ ಎಂದು ಪರೀಕ್ಷಿಸಲು ಸುಲಭವಾದ ಮಾರ್ಗವಿದೆ
ಸಾಕಷ್ಟು ನೀರು: ನಿಮ್ಮ ಮೂತ್ರದ ಬಣ್ಣವನ್ನು ನೋಡಿ; ಹಗುರವಾದ ಬಣ್ಣವಾದರೆ ಉತ್ತಮ.

6. ತಡವಾಗಿ ಚಿಕಿತ್ಸೆ. ನಿಮ್ಮ ಎಲ್ಲಾ ಆರೋಗ್ಯ ಸಮಸ್ಯೆಗಳಿಗೆ ಸರಿಯಾಗಿ ಚಿಕಿತ್ಸೆ ನೀಡಿ ಮತ್ತು ನಿಮ್ಮ ಆರೋಗ್ಯವನ್ನು ನಿಯಮಿತವಾಗಿ ಪರೀಕ್ಷಿಸಿ. ನಾವೇ ಸಹಾಯ ಮಾಡೋಣ ... ದೇವರು ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ಈ ವರ್ಷ ಪ್ರತಿಯೊಂದು ಕಾಯಿಲೆಯಿಂದ ರಕ್ಷಿಸುತ್ತಾನೆ.

(3) ಈ ಮಾತ್ರೆಗಳನ್ನು ತಪ್ಪಿಸಿ, ಅವು ತುಂಬಾ ಅಪಾಯಕಾರಿ:
* ಡಿ–ಕೋಲ್ಡ್
* ವಿಕ್ಸ್ ಆಕ್ಷನ್ –500
* ಆಕ್ಟಿಫೈ ಡ್
* ಕೋಲ್ಡಾರಿನ್
* ಕಾಸೋಮ್
* ನೈಸ್
* ನಿಮುಲಿಡ್
* ಸೆಟ್ರಿಜೆಟ್–ಡಿ

ಅವುಗಳು ಫೆನೈಲ್ ಪ್ರೊಪನಾಲ್–ಅಮೈಡ್, ಪಿಪಿಎ ಅನ್ನು ಒಳಗೊಂಡಿರುತ್ತವೆ
ಪಾರ್ಶ್ವವಾಯುಗೆ ಕಾರಣ ವಾಗಿದ್ದು ಮತ್ತು ಯುಎದಲ್ಲಿ ನಿಷೇದ ಪಡಿಸಿದ್ದಾರೆ.

ದಯವಿಟ್ಟು, ಅಳಿಸುವ ಮೊದಲು, ಅದನ್ನು ಹಾದುಹೋಗುವ ಮೂಲಕ ನಿಮ್ಮ ಸ್ನೇಹಿತರಿಗೆ ಸಹಾಯ ಮಾಡಿ ..! ಇದು ಯಾರಿಗಾದರೂ ಸಹಾಯ ಮಾಡಬಹುದು. ಎಷ್ಟು ಸಾಧ್ಯವೋ ಅಷ್ಟು ಫಾರ್ ವರ್ಡ್ ಮಾಡಿ.

ವಾಟ್ಸಾಪ್ ಉಚಿತ, .... ದಯವಿಟ್ಟು ಫಾರ್ಡ್ ವರ್ಡ್ ಮಾಡಿ..ಇದನ್ನು ಓದಿ ಮತ್ತು ಫಾರ್ವರ್ಡ್ ಮಾಡಿ.

ಯುನೈಟೆಡ್ ಸ್ಟೇಟ್ಸ್ ವೈದ್ಯರು ಸಿಲ್ವರ್ ನೈಟ್ರೋ ಆಕ್ಸೈಡ್ನಿಂದ ಉಂಟಾಗುವ ಮಾನವರಲ್ಲಿ ಹೊಸ ಕ್ಯಾನ್ಸರ್ ಅನ್ನು ಕಂಡು–ಕೊಂಡಿದ್ದಾರೆ.
ನೀವು ರೀಚಾರ್ಜ್ ಕಾರ್ಡ್‌ಗಳನ್ನು ಖರೀದಿಸಿದಾಗಲೆಲ್ಲಾ, ನಿಮ್ಮ ಉಗುರುಗಳಿಂದ ಸ್ಕ್ರಾಚ್ ಮಾಡಬೇಡಿ, ಏಕೆಂದರೆ ಇದು ಸಿಲ್ವರ್ ನೈಟ್ರೋ ಆಕ್ಸೈಡ್ ಲೇಪನವನ್ನು ಹೊಂದಿರುತ್ತದೆ ಮತ್ತು ಚರ್ಮದ ಕ್ಯಾನ್ಸರ್ಗೆ ಕಾರಣವಾಗಬಹುದು.

**ಪ್ರಮುಖ ಆರೋಗ್ಯ ಸಲಹೆಗಳು:**

1. ಎಡ ಕಿವಿಯಿಂದ ಫೋನ್ ಕರೆಗಳಿಗೆ ಉತ್ತರಿಸಿ.

2. ನಿಮ್ಮ ಔಷಧಿ ಯನ್ನು ತಣ್ಣೀರಿನ ಜೊತೆ ತೆಗೆದುಕೊಳ್ಳಬೇಡಿ

3. ಸಂಜೆ 5 ರ ನಂತರ ಹೆಚ್ಚಿನ ಊಟ ಸೇವಿಸಬೇಡಿ.

4. ಬೆಳಿಗ್ಗೆ ಹೆಚ್ಚು ನೀರು ಕುಡಿಯಿರಿ, ರಾತ್ರಿಯಲ್ಲಿ ಕಡಿಮೆ.

5. ರಾತ್ರಿ 10 ರಿಂದ ಬೆಳಿಗ್ಗೆ 4 ರವರೆಗೆ ಉತ್ತಮ ನಿದ್ರೆ ಸಮಯ.

6. ಔಷಧಿ ತೆಗೆದುಕೊಂಡ ನಂತರ ಅಥವಾ ಊಟ ಮಾಡಿದ ಕೂಡಲೇ ಮಲಗಬೇಡಿ.

7. ಫೋನ್‌ನ ಬ್ಯಾಟರಿ ಕೊನೆಯ ಬಾರ್‌ಗೆ ಕಡಿಮೆ ಇರುವಾಗ, ಫೋನ್‌ಗೆ ಉತ್ತರಿಸಬೇಡಿ, ಏಕೆಂದರೆ ವಿಕಿರಣವು 1000 ಪಟ್ಟು ಬಲವಾಗಿರುತ್ತದೆ.

ನೀವು ಕಾಳಜಿವಹಿಸುವ ಜನರಿಗೆ ಇದನ್ನು ರವಾನಿಸಬಹುದೇ?
ಈಗಷ್ಟೇ ಮಾಡಿದ್ದೇನೆ.
ದಯೆ ಏನೂ ಖರ್ಚಾಗುವುದಿಲ್ಲ ಆದರೆ ಜ್ಞಾನವೇ ಶಕ್ತಿ ...



# ಅಧಿವೇಶನದಲ್ಲಿ ಅಗಲಿದ ನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಮಾಯಕೊಂಡ ಶಾಸಕ ಬಸವಂತಪ್ಪ



ವಿಧಾನಸಭೆಯಲ್ಲಿ ಸೋಮವಾರದಿಂದ ಆರಂಭವಾಗಿರುವ ಮುಂಗಾರು ಅಧಿವೇಶನದಲ್ಲಿ ಅಗಲಿದ ನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಸಂದರ್ಭದಲ್ಲಿ ಶಾಸಕ ಕೆ.ಎಸ್.ಬಸವಂತಪ್ಪ ಮಾತನಾಡಿದರು.

ನಾಗಮ್ಮ ಕೇಶವಮೂರ್ತಿ ಮಾಡಿರುವ ಸೇವೆ ಅನನ್ಯ
ದಾವಣಗೆರೆ: ದಿ.ನಾಗಮ್ಮ ಕೇಶವಮೂರ್ತಿ ಅವರು, ತಮ್ಮ ಅಧಿಕಾರಾವಧಿಯಲ್ಲಿ ಮಾಡಿರುವ ಸಮಾಜ ಸೇವೆ, ಕೈಗೊಂಡ ಯೋಜನೆಗಳು ನಮಗೆ ಮಾದರಿಯಾಗಿವೆ ಎಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಸ್ಮರಿಸಿದರು.
ಸೋಮವಾರದಿಂದ ಆರಂಭವಾಗಿರುವ ಮುಂಗಾರು ಅಧಿವೇಶನದಲ್ಲಿ ಅಗಲಿದ ನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಬಳಿಕ ಮಾತನಾಡಿದ ಶಾಸಕರು, ಸರಳ ಸಜ್ಜನಿಕೆಯ ಮಾತೃ ಹೃದಯಿ ನಾಗಮ್ಮ ಕೇಶವಮೂರ್ತಿ ಅವರ ಅಧಿಕಾರದಾವಧಿಯಲ್ಲಿ ಅನೇಕ ವೃದ್ಧಾಶ್ರಮಗಳು, ಅಂ–ಧ ಮಕ್ಕಳ ಶಾಲೆಗಳನ್ನು ತೆರೆದಿದ್ದಾರೆ. ವಿಶೇಷವಾಗಿ ನನ್ನ ಮತ ಕ್ಷೇತ್ರದಲ್ಲಿ ಇವತ್ತು ಸರ್ಕಾರಿಗಳು ಇವೆ ಎಂದರೆ ಅದು ನಾಗಮ್ಮ ಕೇಶವಮೂರ್ತಿ ಅವರ ಕೊಡುಗೆಯಾಗಿವೆ. ಪ್ರತಿ ಗ್ರಾಮಗಳಲ್ಲಿ ಸರ್ಕಾರಿ ಶಾಲೆ ಮತ್ತು ಖಾಸಗಿ ಶಾಲೆಗಳನ್ನು ತೆರೆದು ನನ್ನ ಕ್ಷೇತ್ರವನ್ನು ಶಿಕ್ಷಣ ಕ್ಷೇತ್ರವನ್ನಾಗಿ ಮಾಡಿದ್ದಾರೆ. ಅವರ ಅಗಲಿಕೆ ನಮಗೆ ದುಃಖ ಭರಿಸಿದೆ. ಅಂತಹ ಮಹಾತಾಯಿಯ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕೆಂದರು.
ಮಾಯಕೊಂಡ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ವಿಧಾನಸಭೆಯ ಉಪಸಭಾಪತಿಯಾಗಿ, ಬೃಹತ್ ಮತ್ತು ಕೈಗಾರಿ–ಕೆ ಸಚಿವೆಯಾಗಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವೆಯಾಗಿ ಮಾಡಿದ ಕಾರ್ಯಗಳು ಇತಿಹಾಸದಲ್ಲಿ ಅಚ್ಚಳಿಯದೇ ಉಳಿದಿವೆ. ಅಲ್ಲದೇ ಕರ್ನಾಟಕದ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದವರು. ಶಿಕ್ಷಣ ಸಚಿವರಾಗಿದ್ದಾಗ ಇವರು 1 ರಿಂದ 4ನೇ ತರಗತಿಯವರೆಗೆ ಕನ್ನಡ ಮಾಧ್ಯಮ ಕಡ್ಡಾಯಗೊಳಿಸಿದವರು. ಪ್ರಾಥಮಿಕ ಶಾಲಾ ಹಂತದಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಸೇರಿದಂತೆ ಕೈಗೊಂಡ ಹಲವಾರು ಯೋಜನೆಗಳು ಇಂದಿಗೂ ಮಾದರಿಯಾಗಿವೆ ಎಂದರು.

ಅತ್ಯಂತ ಪ್ರೀತಿ, ಗೌರವಕ್ಕೆ ಪಾತ್ರರಾದ ಧೀಮಂತ ಮಹಿಳೆ, ಸಂಘಟನಾ ಚತುರೆ, ಉತ್ಸಾಹದ ಚಿಲುಮೆಯಾಗಿದ್ದ ನಾಗಮ್ಮ ಕೇಶವಮೂರ್ತಿಯವರು ಮಾಯಕೊಂಡ ಕ್ಷೇತ್ರವಲ್ಲದೇ, ದಾವಣಗೆರೆ ಜಿಲ್ಲೆಯ ನೂರಾರು ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣಕ್ಕೆ ಒತ್ತು ನೀಡಿ ಶಾಲೆಗಳನ್ನು ಆರಂಭಿಸಿದವರು ಎಂದು ಸ್ಮರಿಸಿದರು.

ಮಾಜಿ ಸಚಿವರು, ದಲಿತರ ಕಣ್ಮಣಿ ಮಹಾನ್ ನಾಯಕರಾದ ಶ್ರೀನಿವಾಸ್ ಪ್ರಸಾದ್ ಅವರು, ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಮ್ ಅವರ ತತ್ವ ಸಿದ್ಧಾಂತಗಳನ್ನು ಮೈಗೊಂಡಿಸಿಕೊಂಡು ಎರಡನೇ ಅಂಬೇಡ್ಕರ್ ಆಗಿದ್ದ ಶ್ರೀನಿವಾಸ್ ಪ್ರಸಾದ್ ಅವರ ಅಗಲಿಕೆಯಿಂದ ದಲಿತ ಸಮುದಾಯ ಬರಡಾಗಿದೆ ಎಂದು ಇದೇ ಸಂದರ್ಭದಲ್ಲಿ ಸ್ಮರಿಸಿದರು.

# ವಿವಿಧ ಯೋಜನೆಯಡಿ ಸಾಲ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

**ಬೆಂಗಳೂರು :**
ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ವತಿಯಿಂದ 2024–25ನೇ ಸಾಲಿಗೆ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಆರ್ಯ ವೈಶ್ಯ ಆಹಾರ ವಾಹಿನಿ ಯೋಜನೆ, ವಾಸವಿ ಜಲಶಕ್ತಿ ಯೋಜನೆ ಮತ್ತು ಅರಿವು ಶೈಕ್ಷಣಿಕ ಸಾಲ ಯೋಜನೆಯಡಿಯಲ್ಲಿ ಸಾಲ ಸೌಲಭ್ಯ ಪಡೆಯಲು ಕರ್ನಾಟಕ ಆರ್ಯ ವೈಶ್ಯ ಸಮುದಾಯಕ್ಕೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

"ನಮೂನೆ ಜಿ" ಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಲ್ಲಿಸಬೇಕು. ಅರ್ಜಿದಾರರು ಕರ್ನಾಟಕ ರಾಜ್ಯದವರಾಗಿದ್ದು, ಅವರ ಖಾಯಂ ವಿಳಾಸವು ಕರ್ನಾಟಕ ರಾಜ್ಯದಲ್ಲಿರಬೇಕು. ಅರ್ಜಿದಾರ ಮೊಬೈಲ್ ಸಂ–ಖ್ಯೆಯ ಆಧಾರ್ ಸಂಖ್ಯೆಗೆ ಜೋಡಣೆಯಾಗಿರಬೇಕು. ಮತ್ತು ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಆಗಿರಬೇಕು.

ಅರಿವು ಶೈಕ್ಷಣಿಕ ಸಾಲ ಯೋಜನೆ –ಸಿ.ಇ.ಟಿ (CET) ಹಾಗೂ ಎನ್.ಇ.ಇ.ಟಿ (NEET) ಕೌನ್ಸಿಲಿಂಗ್ ಮುಗಿದ ನಂತರ ಅರ್ಜಿಗಳನ್ನು ಆಹ್ವಾನಿಸಲಾಗುವುದು.

ಆಸಕ್ತರು ವೆಬ್ ಸೈಟ್ http://www.kacdc.karnataka.gov.in ನಲ್ಲಿ ಆಗಸ್ಟ್ 31ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದು.
ವಿಶೇಷ ಸೂಚನೆ : ಮೇಲ್ಕಾಣಿಸಿದ ಯೋಜನೆಗಳ ಮಾರ್ಗಸೂಚಿ ಹಾಗೂ ಅರ್ಹತೆಗಳ ಸಂಕ್ಷಿಪ್ತ ವಿವರಗಳನ್ನು ಕಿಖ ಕೋಡ್ ಅನ್ನು ಸ್ಕ್ಯಾನ್ ಮಾಡಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ (ನಿ), ಜಿಲ್ಲಾ ವ್ಯವಸ್ಥಾಪಕರು ಕಛೇರಿ, ಬೆಂಗಳೂರು ಉತ್ತರ ಜಿಲ್ಲೆ, ನಂ.324/62, ಸರ್ವಶೀಲಾ ಕಾಂಪ್ಲೆಕ್ಸ್, ಬಳ್ಳಾರಿ ಮೈನ್ ರೋಡ್, ಗಂಗಾನಗರ, ಬೆಂಗಳೂರು–560 032 ಅಥವಾ ದೂರವಾಣಿ ಸಂಖ್ಯೆ 9448451111, 080–23539601 ಗೆ ಸಂಪರ್ಕಿಸಬಹುದು ಎಂದು ಬೆಂಗಳೂರು ಉತ್ತರ ಜಿಲ್ಲಾ, ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ (ನಿ) ದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: SUCHITHRA PRINTER's & PUBLISHER's,#378/379, MAYAGAPPA COMPLEX'' 1st Stage 6th phase Industrial Town West of Chord Road Rajajinagar Bengaluru 560044,karnataka.
Publised by: S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.
Owned by: S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.
Printed At :SUCHITHRA PRINTER's & PUBLISHER's,#378/379, MAYAGAPPA COMPLEX'' 1st Stage 6th phase Industrial Town West of Chord Road Rajajinagar Bengaluru 560044,karnataka.
Editor :S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.